# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ ಜೂನ್ 1-30 2017**

KANNADA MONTHLY JUNE 1-30 2017

ಸಂಪುಟ 2, ಸಂಚಿಕೆ 10 ಪುಟ : 24, ಬೆಲೆ : ರೂ. 5–00

Vol. 2, Issue 10, Pages: 24, Price : Rs. 5-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



## ಒಳಪುಟಗಳಲ್ಲಿ...

ಸ್ತ್ರೀಶಕ್ತಿಯನ್ನು ಕಡೆಗಣಿಸದಿರಿ **Pg. No. 3**

ಸೌಂದರ್ಯವೂ ಹೆಚ್ಚಲಿ **Pg. No. 6**

ಇಳಕಲ್ ಸೀರೆ **Pg. No. 8**

ರಾಜ ರಾಣಿಯರ ಮೊದಲನೆ ವರ್ಷದ ವಿವಾಹ ವಾರ್ಷಿಕೋತ್ಸವ **Pg. No. 22**

**ನಾಡಿನ ಜನತೆಗೆ ರಂಜಾನ್ ಹಬ್ಬದ ಹಾಗೂ ಫಾದರ್ಸ್ ಡೇ ಪ್ರಯುಕ್ತ ಶುಭಾಶಯಗಳು**



## ಚಿತ್ರಸುದ್ದಿ



ಮದರ್ಸ್ ಡೇ ಪ್ರಯುಕ್ತ (14–5–2017) ಈ ಚಿತ್ರವೊಂದು ಸಾಂದರ್ಭಿಕವಾಗಿ ಪ್ರಕಟಿಸಿದೆ. ಭಾರತ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ಮೋದಿಯವರು ಅವರ ತಾಯಿಯವರೊಂದಿಗೆ ಇರುವ ಚಿತ್ರ



ಫಾದರ್ಸ್ ಡೇ ಪ್ರಯುಕ್ತ (18–6–2017) ಈ ಚಿತ್ರವೊಂದು ಸಾಂದರ್ಭಿಕವಾಗಿ ಪ್ರಕಟಿಸಿದೆ. ಹೆಬ್ಬಾಳು ಕ್ಷೇತ್ರದ ಚುನಾವಣೆಯಲ್ಲಿ ಗೆದ್ದ ಶ್ರೀ ನಾರಾಯಣಸ್ವಾಮಿಯವರಿಗೆ ಅವರ ಮಗಳು ಅಭಿನಂದಿಸುತ್ತಿರುವ ಚಿತ್ರ, ಈ ದಿವಸಕ್ಕೆ ಸರಿಯಿರುವುದರಿಂದ ಪ್ರಕಟಿಸಲಾಗಿದೆ.

## ನನ್ನ ಮಾತು
### ಸ್ತ್ರೀಶಕ್ತಿಯನ್ನು ಕಡೆಗಣಿಸದಿರಿ



ಕೇಂದ್ರ ಸರ್ಕಾರ ಬಿಜೆಪಿ ಪಕ್ಷ ಮೂರು ವರ್ಷ ಆಡಳಿತ ನಡೆಸಿದ್ದು, ಅದರ ಜೊತೆಯಲ್ಲೇ ಕಾಂಗ್ರೆಸ್ ಪಕ್ಷ ಕರ್ನಾಟಕ ರಾಜ್ಯದಲ್ಲಿ ನಾಲ್ಕು ವರ್ಷ ಪೂರೈಸಿದ್ದರ ಪ್ರಯುಕ್ತ ಹಲವಾರು ಕಾರ್ಯ ಕ್ರಮಗಳು ನಡೆಯುತ್ತಿವೆ. ಒಂದು ಅಂಶ ಗಮನದಲ್ಲಿರಲಿ, ಅದೇನೆಂದರೆ ಹೇಗೆ ಕೆಲಸ ಮಾಡಿದೆ ಏನೇನು ಅನುಕೂಲವಾಗಿದೆ ಎಂಬುದರ ಬಗ್ಗೆ ನಿಮಗೆ ನೀವೇ ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ನಿಮ್ಮನ್ನು ಅಧಿಕಾರಕ್ಕೆ ತಂದ ಜನಗಳು ಹೇಳಬೇಕು. ನಿಮ್ಮ ಕಾರ್ಯ ವೈಖರಿಯ ಬಗ್ಗೆ. ಆಗ ನಿಮ್ಮ ಕಾರ್ಯ ಯೋಜನೆಗಳೆಲ್ಲವೂ ಸಫಲ.

ಎಲ್ಲ ರಾಜಕೀಯ ಪಕ್ಷಗಳೂ ಪದೇ ಪದೇ ಮಹಿಳೆಯರ ಬಗ್ಗೆ ಸಮಾನತೆ ಹಾಗೂ ಸಹಾನುಭೂತಿಯನ್ನು ತೋರಿಸುತ್ತಿರುತ್ತವೆ. ನಿಜವಾಗಲೂ ಎಲ್ಲ ಪಕ್ಷಗಳು ಮುಂಬರುವ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಶೇ. 33ರಷ್ಟು ಮಹಿಳಾ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸಿ. ಎಲ್ಲ ಪಕ್ಷಗಳಲ್ಲೂ ಮಹಿಳಾ ಅಭ್ಯರ್ಥಿಗಳಿದ್ದಾರೆ. ಇದರಲ್ಲೇನಾದರೂ ಪಕ್ಷಗಳು ಎಡವಿದರೆ ಫಲಿತಾಂಶ ತಲೆ ಕೆಳಕು. ಈಗಿನಿಂದಲೇ ಮಹಿಳಾ ಅಭ್ಯರ್ಥಿಗಳ ಬಗ್ಗೆ ಸಿದ್ಧತೆಗೊಳ್ಳಿ, ಅವರಿಂದ ನಿಮ್ಮ ಪಕ್ಷಕ್ಕೆ ಒಳ್ಳೆಯದಾಗುತ್ತದೆ.

ಮಾತನಾಡುವುದನ್ನು ತೂಕದಿಂದ ಮಾತನಾಡಬೇಕು. ತಾಳ್ಮೆ ಇರಲೇಬೇಕು. ಇಲ್ಲವಾದಲ್ಲಿ ನಿಮ್ಮ ಸ್ವಂತ ಬೆಲೆಗೆ ಅಂಕಗಳು ದೊರೆಯುತ್ತದೆ. ಪಶ್ಚಾತ್ತಾಪ ಪಡುವುದಕ್ಕಿಂತ ಈಗಲೇ ಜಾಗ್ರತೆಯಿಂದಿರಿ ಎಂಬುದು ನಮ್ಮೆಲ್ಲರ ಆಶಯ.

*ಸಂಪಾದಕ*
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**

**ಜೂನ್, 1-30 2017**

KANNADA MONTHLY

JUNE 1-30 2017

ಸಂಪುಟ 2, ಸಂಚಿಕೆ 10, ಪುಟ:24
Price/ಬೆಲೆ : ರೂ. 5-00
Vol. 2, Issue 10, Pages: 24

ಮುಖಪುಟ:
**ಶೃಂಗೇರಿ ಶಾರದಾದೇವಿ ದೇವಸ್ಥಾನ**

ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**

ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803-34444

ಉಪಸಂಪಾದಕರು:
**ಎಸ್.ವೆಂಕಟರವಣಪ್ಪ**
**ಸಾವಿತ್ರಿ ಎಂ.ಸಿ.**

ಕಛೇರಿ ವಿಳಾಸ:
ನಂ. 612, ಕೇರಾಫ್ ಮೆಟ್ರೋ ಟೈಲರ್ಸ್, ನಾರಾಯಣಶಾಸ್ತ್ರಿ ರಸ್ತೆ, ಶಾಂತಲಾ ಸಿಗ್ನಲ್ ಲೈಟ್ ಹತ್ತಿರ, ಕೆ.ಆರ್. ಮೊಹಲ್ಲಾ, ಮೈಸೂರು-24.
E-mail: mahilavishesha@yahoo.com
Web: www.mahilavishesha.in

2



# ಕಂಚುಕದಿಂದ ಬ್ರಾವರೆಗಿನ ಮಜಲುಗಳು

ಮೊಹೆಂಜೊದಾರೋ ಮತ್ತು ಹರಪ್ಪ ನಾಗರಿಕತೆಗಿಂತ ಹಿಂದೆ, ಮಹಿಳೆಯರಗೆ ತಮ್ಮ ವಕ್ಷಸ್ಥಳವನ್ನು ಮರೆಮಾಡಿಕೊಳ್ಳುವ ಅಗತ್ಯ ಕಂಡಿರಲಿಲ್ಲ. ಅವರು ಅದಕ್ಕಾಗಿ ಲಜ್ಜಿತರಾಗಬೇಕಿರಲಿಲ್ಲ. ಇಂದಿಗೂ ಕೆಲವು ದೇಶವಿದೇಶಗಳ ಆದಿವಾಸಿ ಜನಾಂಗವು ಆ ಕಾಲದ ಉದಾಹರಣೆಯಾಗಿ ಉಳಿದಿವೆ.

ಮಹಿಳೆಯರ ಶರೀರದ ಈ ಗುರುತು, ಪ್ರಾರಂಭದಿಂದಲೂ ಆಕರ್ಷಣೆ ಮತ್ತು ರೋಮಾಂಚನದ ವಿಷಯವಾಗಿದೆಯೆಂಬುದು ಖಂಡಿತ. ಅವುಗಳನ್ನು ತೆರೆದಿಡುವುದಕ್ಕಿಂತಲೂ ಮರೆ ಮಾಡುವುದು ಮತ್ತು ಬ್ರಾನಲ್ಲಿ ಅಲಂಕರಿಸುತ್ತಾ ಬಂದಿರುವ ರೀತಿ ನೀತಿಗಳೂ ಅಷ್ಟೇ ರೋಮಾಂಚಕಾರಿಯಾಗಿದೆ.

**ಪುರಾತನ ಇತಿಹಾಸ**

4000 ವರ್ಷಗಳ ಹಿಂದಿನದೆನ್ನಲಾದ ಮೊಹೆಂಜೊದಾರೊ ಪಟ್ಟಣದ ಅವಶೇಷಗಳು ಭೂಶೋಧನೆಯ ಅಗೆತದಲ್ಲಿ ದೊರೆತಾಗ, ಅವುಗಳಲ್ಲಿ ಮಹಿಳೆಯರು ತಮ್ಮ ಶರೀರದ ಮೇಲೆ ಕೇವಲ ಒಂದೇ ವಸ್ತ್ರವನ್ನಿಟ್ಟಿರುವುದು ಕಂಡುಬಂದಿತು. ಸೊಂಟದಿಂದ ಕೆಳಗೆ ತೊಡೆಯವರೆಗೆ ಒಂದು ಬಟ್ಟೆಯನ್ನು ಸುತ್ತಿ ಕಟ್ಟಲಾಗುತ್ತಿತ್ತು.

ಅದೇ ಬಟ್ಟೆಯ ಒಂದು ತುದಿಯನ್ನು ಹೆಗಲ ಮೇಲೆ ಹಾಕಿಕೊಳ್ಳುತ್ತಿದ್ದುದೂ ಉಂಟು. ಆದರೆ ಹೆಚ್ಚಾಗಿ ವಕ್ಷವು ತೆರೆದಂತೆಯೇ ಇರುತ್ತಿದ್ದುದು ಕಂಡುಬಂದಿದೆ. ಹೆಗಲ ಮೇಲೆ ಬಟ್ಟೆ ಹಾಕಿಕೊಂಡರೂ ಅದು ವಕ್ಷವನ್ನು ಮುಚ್ಚಬೇಕೆಂಬ ಅಭಿಪ್ರಾಯದಿಂದಲ್ಲ.

ವೇದಕಾಲದಲ್ಲಿ ಸೊಂಟದಿಂದ ಕೆಳಗೆ, ಮಂಡಿಯಿಂದ ಮೇಲೆ ಕಚ್ಚೆಯಂತೆ ಕಟ್ಟಿದ ಧೋತಿಯ ಜೊತೆಗೆ ವಕ್ಷದ ಮೇಲೆ ಒಂದು ಅಗಲವಾದ ಪಟ್ಟಿಯನ್ನು ಬಿಗಿದಿರಲಾಗುತ್ತಿತ್ತು. ವಕ್ಷಸ್ಥಲವನ್ನು ಮರೆಮಾಡಲು ಬಳಸುತ್ತಿದ್ದ ಈ ಪಟ್ಟಿಯೂ ಸಾಧಾರಣ ಮತ್ತು ತೆಳುವಾದ ಬಟ್ಟೆಯದಾಗಿರುತ್ತಿತ್ತು. ವಕ್ಷಸ್ಥಲವನ್ನು ಮರೆಮಾಡಲು ಬಳಸುತ್ತಿದ್ದ ಈ ಪಟ್ಟಿಯೂ ಸಾಧಾರಣ ಮತ್ತು ತೆಳುವಾದ ಬಟ್ಟೆಯದಾಗಿರುತ್ತಿತ್ತು.

ಕೆಲವು ಕಡೆ ಈ ಪಟ್ಟಿಯನ್ನು ಸ್ಕಾರ್ಫ್‌ನಂತೆ ತ್ರಿಕೋಣಾಕಾರದಲ್ಲಿ ಕಟ್ಟಲಾಗುತ್ತಿತ್ತು. ಬರುಬರುತ್ತಾ ಅದನ್ನು ಅಲಂಕರಿಸಲು ಬಾರ್ಡರ್ ಅಥವಾ ಫ್ರಿಲ್ ಇರುವ ಬಟ್ಟೆಯನ್ನು ಬಳಸಲಾಗುತ್ತಿತ್ತು. ಬಟ್ಟೆಯ ತುದಿಯನ್ನು ಬೆನ್ನಿನ ಮೇಲೆ ಗಂಟು ಹಾಕಿ ವಿವಿಧ ಆಕಾರಗಳಲ್ಲಿ ಕಟ್ಟಲಾಗುತ್ತಿತ್ತು. ಆ ಕಾಲದಲ್ಲಿ ಅಂದು 'ಕಂಚುಕ' ಎಂಬ ಹೆಸರಿನಿಂದ ಪ್ರಚಲಿತವಾಯಿತು. ವೇದಕಾಲ ಮತ್ತು ಪುರಾಣಕಾಲದ ಕಂಚುಕವು ಯಾವುದೇ ಬದಲಾವಣೆಯನ್ನು ಹೊಂದಲಿಲ್ಲ.

ಕ್ರಿ.ಪೂ. 2000ನೇ ಇಸವಿಯಲ್ಲಿ ಗ್ರೀಕ್ ಐರ್ಲೆಂಡ್‌ನ ಮಹಿಳೆಯರೂ ಸ್ತಲಗಳನ್ನು ಮುಚ್ಚಲು ಬಟ್ಟೆಯನ್ನು ಕಟ್ಟಿಕೊಳ್ಳುತ್ತಿದ್ದರು.

ಬೌದ್ಧಕಾಲದವರೆಗೂ ಪರದೇಶದವರು ಭಾರತಕ್ಕೆ ಅಷ್ಟಾಗಿ ಕಾಲಿಟ್ಟಿರಲಿಲ್ಲವಾಗಿ ವೈದಿಕ ಆರ್ಯರ ಉಡುಪಿನ ಮೇಲೆ ವಿದೇಶೀ ಪೋಷಾಕಿನ ಪ್ರಭಾವ ಬಿದ್ದಿರಲಿಲ್ಲ.

ಕ್ರಿ.ಪೂ. 516ರಲ್ಲಿ ಮೊಟ್ಟಮೊದಲಿಗೆ ಪಾರ್ಸಿ ಜನರು ಭಾರತಕ್ಕೆ ಬಂದರು. ಆಗ ಪಾರ್ಸಿ

ಮತ್ತು ಭಾರತೀಯ ಶಿಷ್ಟಾಚಾರಗಳು ಬೆರೆಯಲಾರಂಭಿಸಿದವು. ನಂತರ ಗ್ರೀಕ್ ರಾಜ ಸಿಕಂದರನ ಆಗಮನವಾಯಿತು.

ಸುಮಾರು ಕ್ರಿ.ಪೂ. 500ರಲ್ಲಿ ಗ್ರೀಕ್ ಮಹಿಳೆಯರು ಮೊದಲ ಬಾರಿಗೆ ಸ್ಟ್ರಾಪ್ ಉಳ್ಳ ಬ್ರಾ ಧರಿಸಿದರು. ಅದರಲ್ಲಿ ಸ್ತನವನ್ನು ಮುಚ್ಚುವ ಪಟ್ಟಿಯನ್ನು ಸಣ್ಣ ಸಣ್ಣ ಪಟ್ಟಿಗಳ (ಸ್ಟ್ರಾಪ್) ಸಹಾಯದಿಂದ ಹೆಗಲಿನ ಮೇಲೆ ನಿಲ್ಲಿಸಲಾಗುತ್ತಿತ್ತು.

**ಭಾರತದಲ್ಲಿ ಪ್ರಾರಂಭ**

ಕ್ರಿ.ಪೂ. 322ರಲ್ಲಿ ಚಂದ್ರಗುಪ್ತ ಮೌರ್ಯನ ವಂಶಕಾಲವು ಪ್ರಾರಂಭವಾಗಿದ್ದ ಸಮಯದಲ್ಲಿ, ಭಾರತದ ಮಹಿಳೆಯರು ಗ್ರೀಕ್ ಮಹಿಳೆಯರಂತೆ ಭುಜದ ಪಟ್ಟಿಗಳುಳ್ಳ ಕಂಚುಕವನ್ನು ಬಳಸುತ್ತಿದ್ದರು. ಆ ಕಾಲದ ಪ್ರಸಿದ್ಧ ನರ್ತಕಿಯರಾದ ಆಮ್ರಪಾಲಿ, ಚಂದ್ರಲೇಖಾ ಮುಂತಾದವರು ಕಂಚುಕವನ್ನು ಧರಿಸಿಯೇ ನೃತ್ಯ ಮಾಡುತ್ತಿದ್ದರು. ಇತಿಹಾಸದಲ್ಲಿ ಈ ನರ್ತಕಿಯರ ಉಲ್ಲೇಖ ಹೆಚ್ಚಿಲ್ಲವಾದರೂ, ಕಥೆ ಮತ್ತು ದಂತಕಥೆಗಳಲ್ಲಿ ಇವರ ಬಗ್ಗೆ ಸಾಕಷ್ಟು ವಿವರಣೆ ದೊರೆಯುತ್ತದೆ.

ಕ್ರಿ.ಪೂ. 65ರಲ್ಲಿ ನೀರೋ ಎಂಬ ರಾಜನ ದರ್ಬಾರಿನಲ್ಲಿ ಕೆಲಸ ಮಾಡುತ್ತಿದ್ದ ಎಪಿಕೆರಿಸ್ ಎನ್ನುವ ಮಹಿಳೆಯು ರಾಜನನ್ನು ಹತ್ಯೆ ಮಾಡುವ ಪ್ರಯತ್ನದಲ್ಲಿ ಅಸಫಲಳಾದಾಗ, ತನ್ನ ಬ್ರಾದ ಬಟ್ಟೆಯನ್ನೇ ಕುತ್ತಿಗೆಗೆ ಬಿಗಿಯಾಗಿ ಸುತ್ತಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು.

ಏಳನೆಯ ಶತಮಾನದಿಂದ ಹನ್ನೆರಡನೆಯ ಶತಮಾನದವರೆಗೆ ಭಾರತದಲ್ಲಿ ರಜಪೂತರ ಆಳ್ವಿಕೆಯಿತ್ತು. ಈ ಕಾಲದಲ್ಲಿ ಮಹಿಳೆಯರು ಸೊಂಟದಿಂದ ಕಾಲಿನವರೆಗೆ ಇಳಿಬೀಳುವಂತೆ ಸಡಿಲವಾದ ಬಟ್ಟೆ ತೊಡುತ್ತಿದ್ದರು. ಸೊಂಟಕ್ಕೆ ಬೆಲ್ಟ್‌ನಂತೆ ಬಟ್ಟೆಯ ಪಟ್ಟಿಯನ್ನು ಕಟ್ಟಿಕೊಳ್ಳುತ್ತಿದ್ದರು. ಆದರೆ ಎದೆಯ ಮೇಲೆ ಬಹಳ ಕಡಿಮೆ ಬಟ್ಟೆ ತೊಡುತ್ತಿದ್ದರು.

ಹದಿನೈದನೇ ಶತಮಾನದ ಆರಂಭದಲ್ಲಿ ಗುಜರಾತಿನ ಮಹಿಳೆಯರು ಕಂಚುಕಕ್ಕೆ ಚೋಲಿ ಮತ್ತು ಏಪ್ರನ್‌ನ ಒಂದು ಹೊಸ ರೂಪ ಕೊಟ್ಟರು. ಸ್ತನಗಳ ಆಕಾರಕ್ಕೆ ತಕ್ಕಂತೆ ಬಟ್ಟೆಯನ್ನು ಹೊಲಿಯಲಾಯಿತು. ಮತ್ತು ಅದು ವಕ್ಷದ ಮೇಲೆ ನಿಲ್ಲುವಂತೆ ದಾರಗಳನ್ನು ಅಳವಡಿಸಲಾಯಿತು. ಆ ದಾರಗಳನ್ನು ಕತ್ತು ಮತ್ತು ಬೆನ್ನಿನ ಹಿಂದೆ ಕಟ್ಟಲಾಗುತ್ತಿತ್ತು.

(ಮುಂದುವರೆಯುವುದು)

**ನಗೆಹನಿ**

ಸರಕಾರಿ ನೌಕರಿಯಲ್ಲಿರುವ ದಂಪತಿಯ ನಡುವೆ ಭೀಕರ ಜಗಳವುಂಟಾಯಿತು.

ಪತಿ: ನಾನು ಪತಿಯ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ.

ಪತ್ನಿ: ಸರಿ ಸರಿ... ಆದರೆ ಪರ್ಯಾಯ ವ್ಯವಸ್ಥೆ ಆಗುವವರೆಗೂ ಹುದ್ದೆಯಲ್ಲಿರತಕ್ಕದ್ದು!

★★★

ಶ್ರೀಮಂತ: ನನ್ನ ಬಳಿ ಕಾರು, ಬಂಗಲೆ, ಹಣ, ಫಾರ್ಮ್‌ಹೌಸ್ ಹಾಗೂ ನೌಕರರಿದ್ದಾರೆ. ನಿನ್ನ ಬಳಿ ಏನಿದೆ?

ಬಡವ: ನನ್ನ ಬಳಿ ಒಬ್ಬ ಮಗನಿದ್ದಾನೆ. ಹಾಗೆಯೇ ಅವನ ಜತೆ ನಿನ್ನ ಏಕಮಾತ್ರ ಮಗಳಿದ್ದಾಳೆ...!



# ಏರುತ್ತಿರುವ ವಯಸ್ಸಿನ ಜೊತೆ ಸೌಂದರ್ಯವೂ ಹೆಚ್ಚಲಿ



(ಹಿಂದಿನ ಸಂಚಿಕೆಯಿಂದ)

ಜೋನ್ ಕಥೆಗಳನ್ನು ಬರೆಯುತ್ತಾರೆ. ಅವರು ಅನೇಕ ಮದುವೆಗಳನ್ನೂ ಆಗಿದ್ದಾರೆ. ಮಾತನಾಡುವುದು ಕಡಿಮೆ. ದಿನವೂ ವ್ಯಾಯಾಮ ಮಾಡುತ್ತಾರೆ. ಕಡಿಮೆಯೆಂದರೆ 20 (ದಂಡ) ಹಾಕುತ್ತಾರೆ. ಲಿಫ್ಟ್‌ನ್ನು ಉಪಯೋಗಿಸುವುದಿಲ್ಲ. ಇದೂ ಒಂದು ರೀತಿಯ ವ್ಯಾಯಾಮವೇ.

ಹಸಿವಾದಾಗ ಸಾದಾ ಆಹಾರ ಅದೂ ಸ್ವಲ್ಪ ತಿನ್ನುತ್ತಾರೆ. ದಿನವಿಡೀ ಏನಾದರೂ ತಿನ್ನುತ್ತಲೇ ಇರುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬುದು ಅವರ ಭಾವನೆ. ‘ಜೀರ್ಣಕ್ರಿಯೆಗೂ ಸ್ವಲ್ಪ ವಿಶ್ರಾಂತಿಯ ಅಗತ್ಯವಿದೆ’ ಎನ್ನುತ್ತಾರೆ ಆಕೆ.

ಜೋನ್ ಕಾಲಿನ್ಸ್ ತಮ್ಮ ಒಂದು ಪುಸ್ತಕದಲ್ಲಿ ತುಂಬಾ ವಯಸ್ಸಾಗಿದ್ದರೂ ಇನ್ನೂ ಯುವತಿಯರಂತೆ ಕಾಣುವ ಪ್ರಸಿದ್ಧ ಮಹಿಳೆಯರ ಬಗ್ಗೆ ಬರೆದಿದ್ದಾರೆ. ಗ್ಲಾಮರ್ ಜಗತ್ತಿನ ಒಬ್ಬ ಮಹಿಳೆ ಇವಾನಾ ಬಗ್ಗೆ ಹೇಳುತ್ತಾ ಆಕೆ ದಿನಕ್ಕೆ 2 ಗಂಟೆ ವ್ಯಾಯಾಮ ಮಾಡುತ್ತಾಳೆ. ರಾತ್ರಿ ಮಾತ್ರ ಪೂರ್ತಿ ಊಟ ಮಾಡುತ್ತಾಳೆ. ಇಡೀ ದಿನ ಬೇಯಿಸಿದ ಮೊಟ್ಟೆಯ ಒಳಭಾಗ ತಿನ್ನುತ್ತಾಳೆ. ಉತ್ಕೃಷ್ಟವಾದುದನ್ನೇ ಇಷ್ಟಪಡುತ್ತಾಳೆ. ತಪ್ಪು ಅಂತ ತಿಳಿದರೆ ಅದರ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾಳೆ. ಅಂದರೆ ಕಷ್ಟ ಕೊಡುವಂತಹ ವಿಷಯಗಳನ್ನು ಮನಸ್ಸಲ್ಲೇ ಇಟ್ಟುಕೊಂಡು ಕೊರಗುವುದಿಲ್ಲ ಎಂದು ಬರೆದಿದ್ದಾರೆ.

ಜೋನ್ ಕಾಲಿನ್, ‘ಒಮ್ಮೊಮ್ಮೆ ನನಗೆ ನಿರಾಶೆ ಆಗುತ್ತದೆ. ಆಗೆಲ್ಲಾ ನಾನು ನಕ್ಕುಬಿಡುತ್ತೇನೆ. ಮನಬಿಚ್ಚಿ ನಗುವುದು ಆರೋಗ್ಯಕ್ಕೆ ಬಹಳ ಒಳ್ಳೆಯದು’ ಎನ್ನುತ್ತಾಳೆ. ಫಿಲ್ಮ್‌ಗಳಿಗೆ ಚಿತ್ರಕಥೆ ಬರೆಯುವುದರ ಜೊತೆಗೆ ಕಾಲಿನ್ಸ್ ಒಂದು ಪ್ರೊಡಕ್ಷನ್ ಹೌಸ್‌ನ ಮಾಲೀಕಳೂ ಆಗಿದ್ದಾಳೆ. ಆದ್ದರಿಂದ ಸದಾ ವ್ಯಸ್ತಳಾಗಿರುತ್ತಾಳೆ.

‘ಸುಂದರವಾಗಿ ಕಾಣಬೇಕೆಂದರೆ ಯಾವಾಗಲೂ ಚಟುವಟಿಕೆಯಿಂದಿರಿ. ಈ ವಯಸ್ಸಿನಲ್ಲೂ ನಾನು ಯುವತಿಯ ಹಾಗೆ ಕಾಣಲು ಒಂದು ಮೂಲ ಕಾರಣವೆಂದರೆ ನಾನು ಮೈಗಳ್ಳತನ ಮಾಡುವುದಿಲ್ಲ. ತುಂಬಾ ಕೆಲಸ ಮಾಡಿಯಾಗಿದೆ. ಇನ್ನು ವಿಶ್ರಾಂತಿ ತೆಗೆದುಕೊಳ್ಳೋಣ ಎಂದು ಎಂದಿಗೂ ಯೋಚಿಸುವುದಿಲ್ಲ’ ಎನ್ನುತ್ತಾಳೆ ಜೋನ್.

ತನ್ನ ಜೀವನದ ಬಗ್ಗೆ ಹೇಳುತ್ತಾ ಆಕೆ, ‘ನಾನು ಜೀವನದಲ್ಲಿ ಎಲ್ಲವನ್ನೂ ಪಡೆದುಕೊಂಡಿದ್ದೇನೆ. ಇದರರ್ಥ ನಾನು ಬದುಕಿನ ಅಂತಿಮ ಘಟ್ಟದಲ್ಲಿದ್ದೇನೆ ಅಂತಲ್ಲ. ಜೀವನದ ಕಡೆಗಾಲದ ಬಗ್ಗೆ ಯೋಚಿಸುವವರು ಬೇಗನೆ ವೃದ್ಧಾಪ್ಯದ ಕಡೆ ಹೆಜ್ಜೆ ಹಾಕುತ್ತಾರೆ.

ನಾನೀಗ ರಾಬಿನ್ ಹರ್ಲ್‌ಸ್ಟಾನ್ ಜೊತೆ ಹೊಸ ಜೀವನ ಆರಂಭಿಸಿದ್ದೇನೆ. ಅವನು ಏರ್‌ಲೈನ್ಸ್‌ನಲ್ಲಿ ಕೆಲಸ ಮಾಡುತ್ತಾನೆ. ನನಗಿಂತ 25 ವರ್ಷ ಚಿಕ್ಕವನು. ಆದರೆ ನೋಡಿದಾಗ ನಾನು ಅವನ ವಯಸ್ಸಿನಷ್ಟೇ ಕಾಣುತ್ತೇನೆ. ಯುವತಿಯರಂತೆ ಕಾಣುವ ಆಸೆ ಇಟ್ಟುಕೊಂಡಿರುವ ವಯಸ್ಸಾದವರೆಲ್ಲಾ ಚಿಕ್ಕ ವಯಸ್ಸಿನ ಪುರುಷರನ್ನು ಮದುವೆಯಾಗಬೇಕು ಅಥವಾ ಸ್ನೇಹ ಬೆಳೆಸಬೇಕು ಎಂದು ನನ್ನ ಮಾತಿನ ಅರ್ಥವಲ್ಲ.

ಗಂಡನ ಜೊತೆ ರೋಮಾನ್ಸ್ ಮತ್ತು ರೊಮಾನ್ಸ್‌ನಲ್ಲಿ ಹೊಸತನದ ಬಗ್ಗೆ ನೀವು ಎಚ್ಚರವುಳ್ಳವರಾಗಿರಬೇಕು’ ಎನ್ನುತ್ತಾರೆ.

ಸುಂದರವಾಗಿರಬೇಕಾದರೆ ಸೌಂದರ್ಯದ ಬಗ್ಗೆ ಆಸಕ್ತಿ ಇರಬೇಕು. ಯಾರನ್ನಾದರೂ ಪ್ರೀತಿಸಿ ಅಥವಾ ಪ್ರೀತಿಸದಿರಿ ಆದರೆ ನಿಮ್ಮನ್ನು ನೀವು ಪ್ರೀತಿಸಿಕೊಳ್ಳಿ. ಹಾಗಾದರೆ ಈಗಲೇ ಬ್ಯೂಟಿ ಟ್ರೀಟ್‌ಮೆಂಟ್, ಫಿಟ್‌ನೆಸ್, ಯೋಗ, ಮೇಕಪ್ ಮತ್ತು ಇಂತಹದೇ ಇತರ ಸಾಧನಗಳ ಬಗ್ಗೆ ಆಸಕ್ತಿಯನ್ನು ಹೆಚ್ಚಿಸಿಕೊಳ್ಳಲು ಆರಂಭಿಸಿ. ನಿಮ್ಮ ಮನಸ್ಸಿಗೆ ಈ ಸಂದೇಶ ಕೊಡಿ, ‘ನಾನಿನ್ನೂ ಯುವತಿಯೇ’!

*ಸಂಗ್ರಹ: ಸವಿತ*

## ದಾನದಿಂದ ಶ್ರೇಯಸ್ಸು

| | |
|---|---|
| ಅನ್ನದಾನ ಮಾಡಿದರೆ | – ದಾರಿದ್ರ್ಯ ನಾಶವಾಗುತ್ತದೆ, ಸಾಲಗಳು ತೀರುತ್ತವೆ. |
| ವಸ್ತ್ರದಾನ ಮಾಡಿದರೆ | – ಆಯಸ್ಸು ಹೆಚ್ಚುತ್ತದೆ. |
| ಜೇನುತುಪ್ಪ ದಾನ ಮಾಡಿದರೆ | – ಪುತ್ರ ಭಾಗ್ಯವಾಗುತ್ತದೆ. |
| ದೀಪ ದಾನ ಮಾಡಿದರೆ | – ಕಣ್ಣು ಚೆನ್ನಾಗಿರುತ್ತದೆ. |
| ಅಕ್ಕಿ ದಾನ ಮಾಡಿದರೆ | – ಪಾಪ ಪರಿಹಾರವಾಗುತ್ತದೆ. |
| ತುಪ್ಪ ದಾನ ಮಾಡಿದರೆ | – ರೋಗ ನಿವಾರಣೆಯಾಗುತ್ತದೆ. |
| ಹಾಲು ದಾನ ಮಾಡಿದರೆ | – ದುಃಖ ನೀಗುತ್ತದೆ. |
| ಮೊಸರು ದಾನ ಮಾಡಿದರೆ | – ಇಂದ್ರಿಯಗಳು ವೃದ್ಧಿಯಾಗುತ್ತವೆ. |
| ಹಣ್ಣುಗಳನ್ನು ದಾನ ಮಾಡಿದರೆ | – ಬುದ್ಧಿ-ಸಹಾಯ ಲಭಿಸುತ್ತವೆ. |
| ಬಂಗಾರ ದಾನ ಮಾಡಿದರೆ | – ಕುಟುಂಬದಲ್ಲಿ ಇರುವ ದೋಷ ನೀಗುತ್ತದೆ. |
| ಬೆಳ್ಳಿ ದಾನ ಮಾಡಿದರೆ | – ಮನಸ್ಸಿನ ಚಿಂತೆ ನೀಗುತ್ತದೆ. |
| ಗೋವು ದಾನ ಮಾಡಿದರೆ | – ಋಷಿ ದೇವರು ಪಿತೃಷಿಗಳಿಂದ ವಿಮೋಚನೆ. |



## ಇಳಕಲ್ ಸೀರೆ



ಫ್ಯಾಷನ್ ಜಗತ್ತಿನಲ್ಲಿ ಸೀರೆಗೆ ಎಂದೆಂದಿಗೂ ಭದ್ರ ಸ್ಥಾನ. ರೇಷ್ಮೆ, ಕಾಟನ್, ಸಿಂಥೆಟಿಕ್ ಸೀರೆಗಳು ಫ್ಯಾಷನ್ ಪ್ರಿಯರ ಮನ ತಣಿಸುತ್ತಿವೆ. ಪ್ರಾದೇಶಿಕವಾಗಿ ಕೆಲವು ಭಾಗದ ಸೀರೆಗಳು ರೇಷ್ಮೆ, ಕಾಟನ್‌ಗಳಲ್ಲಿ ಜಗತ್ತಿನಾದ್ಯಂತ ಹೆಸರು ಗಳಿಸಿವೆ. ಇಳಕಲ್ ಸೀರೆಗಳು ಬಣ್ಣ, ನೋಟ, ಅಂದಕ್ಕೆ ಹೆಸರಾಗಿದ್ದು ಯುವತಿಯರಿಂದ ಹಿಡಿದು ಮುದುಕಿಯರವರೆಗೆ ಸೆಳೆಯುವ ಶಕ್ತಿ ಇದಕ್ಕಿದೆ.

ಇಳಕಲ್ ಹತ್ತಿಯ ನೂಲಿಗೆ ಬಣ್ಣ ಹಾಕುವುದಕ್ಕೆ ಹಾಗೂ ಹತ್ತಿಯ ಬಟ್ಟೆಯ ನೇಯ್ಗೆಗೆ ಪ್ರಸಿದ್ಧವಾಗಿರುವಂತೆ ರೇಷ್ಮೆ ಮತ್ತು ಹತ್ತಿಯ ವಿವಿಧ ಶ್ರೇಣಿಯ ಸೀರೆಗಳ ನೇಯ್ಗೆಗೂ ಹೆಸರುವಾಸಿಯಾಗಿದೆ. ಹಾಗೆಯೇ ಹಾಸಿಗೆಯ ಮೇಲ್ಹಾಸುಗಳು, ಹೊದಿಕೆಗಳು, ಪಂಚೆ, ಧೋತಿಗಳು, ರುಮಾಲು, ಸೀರೆಗಳು, ಖಣಗಳು, ಖಾದಿ ಬಟಟೆ ಮತ್ತು ಜಮಖಾನೆ, ಗುಡಾರಗಳ ತಯಾರಿಕೆಗೆ ತುಬಾ ಪ್ರಸಿದ್ಧವಾಗಿದೆ. ಮನೆಯ ಒಳಗಡೆ ನಿರ್ಮಿಸಲಾಗಿರುವ ಪಾರಂಪರಿಗ ಗುಣಿ ಮಗ್ಗಗಳಲ್ಲಿ ನೇಕಾರರು ಹತ್ತಿ ಮತ್ತು ರೇಷ್ಮೆಯ ಬಟ್ಟೆಗಳನ್ನು ನೇಯುತ್ತಾರೆ. ಇಳಕಲ್, ಗುಳೇದಗುಡ್ಡ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಇಂತಹ ಪಾರಂಪರಿಕ ನೇಕಾರರ 4500 ಕುಟುಂಬಗಳಿವೆ. ಇಲ್ಲಿ ಉತ್ಪಾದನೆಯಾಗುತ್ತಿರುವ ವಿವಿಧ ರೀತಿಯ ಬಟ್ಟೆಗಳ ಒಟ್ಟು ಪ್ರಮಾಣ ವಾರ್ಷಿಕ 1.5 ಮಿಲಿಯ ಮೀಟರ್‌ಗಳಾಗಿದ್ದು, ಅದರ ಮೌಲ್ಯ ಸುಮಾರು 100 ಕೋಟಿ ರೂಪಾಯಿಗಳಾಗಿದೆ. ಇದರಲ್ಲಿ ಸೀರೆಗಳ ಪ್ರಮಾಣ ಶೇ. 65ರಷ್ಟು ಎಂದು ಅಂದಾಜು ಮಾಡಲಾಗಿದೆ. ಇನ್ನೊಂದು ಕುತೂಹಲಕರ ಅಂಶವೆಂದರೆ ಇಡೀ ಕರ್ನಾಟಕದಲ್ಲಿ ತಯಾರಾಗುವ ಸೀರೆಗಳ ಒಟ್ಟು ಪ್ರಮಾಣದ ಶೇ. 43 ಭಾಗ ಬಾಗಲಕೋಟೆ ಜಿಲ್ಲೆಯಲ್ಲೇ ತಯಾರಾಗುತ್ತವೆ!

ಈ ನೇಕಾರರನ್ನು ಆರ್ಥಿಕವಾಗಿ ಸ್ಥಿತಿವಂತರೆಂದೇ ಹೇಳಬಹುದು. ಆದರೂ, ಅವರು ಗಿರಣಿಗಳ ತಯಾರಿಕೆಯ ಬಟ್ಟೆಗಳಿಂದ ಭಾರೀ ಸ್ಪರ್ಧೆಯನ್ನೆದುರಿಸುತ್ತಿದ್ದಾರೆ. ಈ ನೇಕಾರರು ತಮ್ಮನ್ನು ದೇವಾಂಗ ಋಷಿಯ ಸಂತತಿಯವರೆಂದು ಭಾವಿಸುತ್ತಿದ್ದು, ತಮ್ಮನ್ನು

ಸಾಳಿಗಳೆಂದು, ದೇವಾಂಗದವರೆಂದು ಕರೆದುಕೊಳ್ಳುತ್ತಾರೆ. ಅವರ ಮನೆದೇವರು ಬಾದಾಮಿಯ ಬನಶಂಕರಿ ದೇವಿ. ಈ ಪ್ರದೇಶದ ನೇಕಾರಿಕೆಯಲ್ಲಿ ಕೆಲವು ಮುಸ್ಲಿಮ್ ಕುಟುಂಬಗಳೂ ನಿರತರಾಗಿರುವುದು ಕಂಡುಬರುತ್ತದೆ.

ಇತರ ಕೈಮಗ್ಗ ಸೀರೆಗಳಲ್ಲಿರುವಂತೆ, ಇಳಕಲ್ ಸೀರೆಗಳೂ ಕೂಡಾ ನಾಲ್ಕು ವಿಶಿಷ್ಟ ಅಂಶಗಳಿಂದ ಕೂಡಿರುತ್ತವೆ. ಅವುಗಳೆಂದರೆ 'ದಡಿ' (ಸೀರೆಯ ಉದ್ದಕ್ಕೂ ಎರಡೂ ಕಡೆಯ ಇರುವ ಅಂಚು), 'ಒಡಲು' (ಸೀರೆಯ ಪ್ರಮುಖ ಭಾಗ), 'ಉಡಿಸೆರಗು' (ಸೀರೆಯ ಕೊನೆಗಿರುವ ಅಡ್ಡಡ್ಡ ಅಂಚುಗಳು), 'ಮೇಲುಸೆರಗು' (ಭುಜದ ಮೇಲಿಂದ ಬೆನ್ನ ಮೇಲೆ ಇಳಿಬಿದ್ದಿರುವ, ಸೀರೆಯ ಅತ್ಯಂತ ಆಕರ್ಷಕ ಭಾಗ. ಕೆಲವು ವೇಳೆ ಅದನ್ನು ತಲೆಯ ಮೇಲೆ ಬರುವಂತೆ ಹೊದೆಯುವುದುಂಟು). ಸೀರೆಯ ಅತ್ಯಂತ ಆಕರ್ಷಕ ಭಾಗವಾಗಿದ್ದು, ಅದರಲ್ಲಿ ಅಡ್ಡಡ್ಡ ಅಂಚುಗಳು ಕಸೂತಿಗಳಿಂದ ಕೂಡಿರುತ್ತವೆ. ಇದು ಇಳಕಲ್ ಸೀರೆಯ ಅತ್ಯಂತ ಆಕರ್ಷಕ ಅಂಶವಾಗಿದ್ದು, ಇದನ್ನು 'ತೋಪು ಸೆರಗು' ಎಂದು ಕೂಡಾ ಕರೆಯುತ್ತಾರೆ. ಅದರಲ್ಲಿ ಕಲ್ಪನೆಗೆ ಮೀರಿದ ಅನೇಕ ವಿನ್ಯಾಸಗಳನ್ನು ಸೇರಿಸಿ, ನೇಯ್ಗೆ ಮಾಡಿರಲಾಗುತ್ತದೆ. ನೇಯ್ಗೆಯ ಉದ್ದ ಹಾಸಿನಲ್ಲಿ ಸೆರಗು ಮತ್ತು ಒಡಲುಗಳಿಗೆ ಬಳಸುವ ನೂಲು ಏಕಪ್ರಕಾರವಾಗಿ, ವಿವಿಧ ಬಣ್ಣಗಳಿಂದ ಕೂಡಿರುತ್ತದೆ. ಇಳಕಲ್ ಸೀರೆಗಳ ನೇಯ್ಗೆಯಲ್ಲಿ ಎರಡು ಜೊತೆ ನೂಲುಗಳಿದ್ದು, ಅವುಗಳನ್ನು ಒಂದಕ್ಕೊಂದು ಸೇರಿಸಲಾಗಿರುತ್ತದೆ. ಇದನ್ನು ಬೇರೆ ಕಡೆ ಕಾಣಲಾಗುವುದಿಲ್ಲ. ಇಳಕಲ್ ಸೀರೆಯ 'ತೋಪು-ತೆನೆ-ಸೆರಗಿನ' ಲಾವಣ್ಯ ಸೊಗಸುಗಳಿಗೆ ಅದರ ಮಧ್ಯಭಾಗದಲ್ಲಿ ಕೇದಗೆಯ ಸಾಲನ್ನು ನೇಯ್ದಿರುವುದು ಕಾರಣವಾಗಿದೆ. ಇದರ ಸೊಗಸನ್ನು ನೋಡಿಯೇ ಅನುಭವಿಸಬೇಕು. ಅದು ಶಬ್ದಗಳಿಗೆ ಆಳವಲ್ಲ!

'ಚಂದ್ರಕಾಳಿ ಸೀರೆ' ಕೆಂಪುಬಣ್ಣದ ಅಂಚು, ಕಸೂತಿ ಮಾಡಿದ ಕಪ್ಪು ಒಡಲಿನ ಇಳಕಲ್ಲು ಸೀರೆಯನ್ನು ಮದುಮಗಳಿಗೂ, ಗರ್ಭಿಣಿ ಸ್ತ್ರೀಯರಿಗೂ ಕೊಡುವ ಪದ್ಧತಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿದೆ. ಇದರಲ್ಲಿ ಕರ್ನಾಟಕದ ಕಸೂತಿಯ ಎಲ್ಲಾ ವಿನ್ಯಾಸಗಳನ್ನೂ ಕಾಣಬಹುದು. ಅದರ ಪಲ್ಲು ಅಥವಾ ಸೆರಗು ಸುಮಾರು 30 ಅಂಗುಲ ಉದ್ದವಿರುತ್ತದೆ. ಅದು ಮಹಿಳೆಯ ಭುಜದ ಮೇಲಿಂದ ಹಾಯ್ದು ಬೆನ್ನಿನ ಮೇಲೆ ಹರಡಿಕೊಳ್ಳುತ್ತದೆ. ಇದು ಹೂವುಗಳು, ಗಿಳಿ, ದೇವಾಲಯದ ಗೋಪುರ, ಪಲ್ಲಕ್ಕಿ, ಆನೆ, ಗೋಡಂಬಿ ಮೊದಲಾದ ವಿನ್ಯಾಸಗಳಿಂದ ಕೂಡಿರುತ್ತದೆ. ಸೀರೆಯ ಉದ್ದಗಲಕ್ಕೂ ನೀಲಿ, ಕಪ್ಪು, ಗಗನದಲ್ಲಿಯ ನಕ್ಷತ್ರಗಳಂತೆ ಬಿಳಿಯ ವಿನ್ಯಾಸಗಳು ಹರಡಿದ್ದು, ಅದು ಎಷ್ಟು ಉಜ್ವಲವಾಗಿ ಕಾಣುತ್ತದೆಯೆಂದರೆ, ಅದು ಬಣ್ಣಿಸಲಸದಳ! ನಕ್ಷತ್ರಗಳಿಂದ ಹೊಳೆಯುವ ನೀಲಿ ಕಪ್ಪು ಬಾನಿನಂತಹ ಈ ಸೀರೆಯ ದಡಿ ಅಥವಾ ಅಂಚುಗಳು ವಿರುದ್ಧ ಬಣ್ಣಗಳಿಂದ ಕೂಡಿದ್ದು, ಅವುಗಳಲ್ಲಿ ಜರಿ ಕೆಲಸ ಮಾಡಲಾಗಿರುತ್ತದೆ. 'ಚಂದ್ರಕಾಳಿ' ಸೀರೆಯನ್ನು ನೋಡಿದವರ ಮನಸ್ಸಿನಲ್ಲಿ ಅದರ ಸೊಗಲು, ಸಾವಣ್ಯಗಳು ಚಿರಸ್ಥಾಯಿಯಾಗಿ ಉಳಿದುಬಿಡುತ್ತವೆ. ಇಂದು ಅಂತಹ ಸೊಗಸಿನ ಸೀರೆಗಳಿಗೆ ಬೇಡಿಕೆ ಕಡಿಮೆಯಾಗುತ್ತಿರುವುದು ವಿಪರ್ಯಾಸದ ಸಂಗತಿ!

ಬಾಗಲಕೋಟೆಯ ಜಿಲ್ಲೆಯ ಹುನಗುಂದ ತಾಲ್ಲೂಕಿನ ಇಳಕಲ್ಲು, ಈ ಸೀರೆಗಳ ಜನ್ಮಸ್ಥಳವಾಗಿದ್ದು, ಅವುಗಳನ್ನು ಇಳಕಲ್ ಸೀರೆಗಳೆಂದೇ ಕರೆಯಲಾಗುತ್ತದೆ. ಈ ತರಹದ ಸೀರೆಗಳನ್ನು ಪಕ್ಕದ ತಾಲ್ಲೂಕುಗಳಾದ ಬಾದಾಮಿ, ಕುಷ್ಟಗಿ ಮತ್ತು ಕೊಪ್ಪಳಗಳಲ್ಲಿಯೂ





ತಯಾರಿಸಲಾಗುತ್ತದೆ. ಹಾಗೆಯೇ, ಇಳಕಲ್ ಸೀರೆಗಳಿಗೆ ಒಪ್ಪುವ ಕುಪ್ಪಸದ ಖಣಗಳಿಗೆ ಅದರ ಸಮೀಪವೇ ಇರುವ ಗುಳೇದಗುಡ್ಡವು ಬಹಳ ಪ್ರಸಿದ್ಧವಾಗಿದೆ!

ಇಳಕಲ್ಲಿನ ಪಾರಂಪರಿಕ ನೇಕಾರರು 'ಪಟ್ಟೆದಂಚಿನ ಸೀರೆ'ಗಳೆಂಬ ಹತ್ತಿಯ ನೂಲಿನ ಸೀರೆಗಳನ್ನೂ ತಯಾರಿಸುತ್ತಾರೆ. ಇವುಗಳು ಅತ್ಯಂತ ಜನಪ್ರಿಯ ಹಾಗೂ ಬಹುಬೇಡಿಕೆಯ ಸೀರೆಗಳಾಗಿವೆ. ಮಾರಾಟಗಾರರ ಬೇಡಿಕೆಯನ್ನನುಸರಿಸಿ ನೇಕಾರರು ತಮ್ಮ ಉತ್ಪನ್ನಗಳಾದ ಸೀರೆಗಳನ್ನೇ ತಯಾರಿಸತ್ತಾರೆ. ಅವರು ರೇಷ್ಮೆಯ ಸೀರೆಗಳನ್ನಲ್ಲದೆ, ಹತ್ತಿಯ ನೂಲು ಸೇರಿಸಿದ ರೇಷ್ಮೆಯ ಸೀರೆಗಳು, ರೇಷ್ಮೆ ಮತ್ತು ಜರಿಯ ಅಂಚುಗಳನ್ನುಳ್ಳ ಮಿಶ್ರ ನೂಲಿನ ಸೀರೆಗಳನ್ನೂ ಪಾರಂಪರಿಕ ವಿನ್ಯಾಸಗಳು ಮತ್ತು ನಮೂನೆಗಳೊಡನೆ ತಯಾರಿಸುತ್ತಾರೆ. 'ತೋಪು-ತೆನೆ-ಸೆರಗಿನ' ರೇಷ್ಮೆ ಸೀರೆಗಳನ್ನು ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಜಿಲ್ಲೆಗಳಲ್ಲಿ ಉಡುವವರ ಘನತೆ, ಗೌರವಗಳ ಸಂಕೇತವೆಂದು ಬಾವಿಸಲಾಗುತ್ತದೆ. ವಿಶೇಷ ಸಂದರ್ಭಗಳು ಮತ್ತು ಹಬ್ಬ ಹರಿದಿನಗಳಲ್ಲಿ ಉಡುವ ಸೀರೆಯೆಂದು, ಈ ಭಾಗದ ಮಹಿಳೆಯರು ಅವುಗಳನ್ನು ಬಹಳ ಜತನದಿಂದ ಕಾಪಾಡಿಕೊಂಡು ಬರುತ್ತಾರೆ! ಅಲ್ಲದೆ ಈ ಸೀರೆಗಳನ್ನು ದೀಪಾವಳಿಯಂದು ಲಕ್ಷ್ಮೀದೇವಿಗೆ ಉಡಿಸಿ, ಅನಂತರ ಮಹಿಳೆಯರು ತಾವು ಉಡುವುದರಿಂದ, ಅವುಗಳಿಗೆ ಧಾರ್ಮಿಕ ಪ್ರಾಮುಖ್ಯತೆಯೂ ದೊರೆತಿದೆ!

ಕರ್ನಾಟಕ ಕೈಮಗ್ಗದ ಅಭಿವೃದ್ಧಿ (1975) ಬಾಗಲಕೋಟೆ ಜಿಲ್ಲೆಯ ಇಳಕಲ್ ಮತ್ತು ಅದರ ಸುತ್ತಲಿನ ಕೈಮಗ್ಗ ನೇಕಾರರಿಗೆ ಇಳಕಲ್‌ನಲ್ಲಿ ತೀವ್ರ ಕೈಮಗ್ಗ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದು, ಅದರ ಕೇಂದ್ರವೊಂದನ್ನು ಅಲ್ಲಿ ಸ್ಥಾಪಿಸಿದೆ. ಈ ಯೋಜನೆಯ ನೆರವಿನಿಂದ ತಯಾರಿಸಲಾದ ಸೀರೆಗಳನ್ನು ನಿಗಮವು ದೇಶದ ವಿವಿಧೆಡೆಗಳಲ್ಲಿ ಸ್ಥಾಪಿಸಲಾಗಿರುವ 'ಪ್ರಿಯದರ್ಶಿನಿ', ಚಿಲ್ಲರೆ ಮಾರಾಟ ಕೇಂದ್ರಗಳಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ ಇಳಕಲ್‌ನಲ್ಲಿ ಎರಡು ನೇಕಾರರ ಸಹಕಾರ ಸಂಘಗಳು ಮತ್ತು ದೋಟಿಹಾಳ್‌ನಲ್ಲಿ ಒಂದು ಮತ್ತು ಸೂಳೆಭಾವಿಯಲ್ಲಿ ಎರಡು ಕಾರ್ಯ ನಿರ್ವಹಿಸುತ್ತಿವೆ. ಈ ಎಲ್ಲಾ ಸಹಕಾರ ಸಂಘಗಳು ಈ ಪ್ರದೇಶದಲ್ಲಿ ಕೈಮಗ್ಗದ ಉದ್ದಿಮೆಯನ್ನು ಉಳಿಸಲು ಹಾಗೂ ಬಲಪಡಿಸಲು ಗಣನೀಯವಾದ ನೆರವು ನೀಡುತ್ತಿದೆಯೆಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೆದರ್‌ಲ್ಯಾಂಡಿನ ಸರ್ಕಾರದ (ಡಚ್) ನೆರವಿನಿಂದ 1984-86ರ ಅವಧಿಯಲ್ಲಿ ಇಳಕಲ್‌ನಲ್ಲಿ 154 ಕಾರ್ಯಾಗಾರ ಸಹಿತವಾದ ವಾಸದ ಮನೆಗಳ ಕಾಲೋನಿಯೊಂದನ್ನು ನಿರ್ಮಿಸಿ ಕೊಡಲಾಗಿದೆ. ಪ್ರತಿಯೊಂದು ಮನೆಯಲ್ಲೂ ಎರಡು ಮಗ್ಗಗಳನ್ನು ವ್ಯವಸ್ಥೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಕಾಲೋನಿಯಲ್ಲಿ ಸಾಮಾನ್ಯ ಉತ್ಪಾದನಾ ಕೇಂದ್ರೊಂದನ್ನು ವ್ಯವಸ್ಥೆಗೊಳಿಸಲಾಗಿದೆ. ಅಲ್ಲದೆ ನಿಗಮವು ಇಳಕಲ್‌ನಲ್ಲಿ ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನೂ ತೆರೆದಿದೆ. ಬೆಂಗಳೂರಿನಲ್ಲಿ ಜವಳಿ ವಿನ್ಯಾಸ ಮತ್ತು ತರಬೇತಿ ಕೇಂದ್ರವನ್ನು ತೆರೆಯಲಾಗಿದೆ. ಇಲ್ಲಿ ನೇಕಾರರ ಸಹಕಾರ ಸಂಘಗಳು ಕಳಿಸಿಕೊಟ್ಟ ಅಭ್ಯರ್ಥಿಗಳಿಗೆ 5 ತಿಂಗಳ ಅವಧಿಯ ತರಬೇತಿಯನ್ನು ನೀಡಲಾಗುವುದು. ತರಬೇತಿ ಅವಧಿಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಮಾಹೆಯಾನ ರೂ. 200ಗಳ ಭತ್ಯೆಯನ್ನು ನೀಡಲಾಗುತ್ತದೆ.

(ಕಳೆದ ಸಂಚಿಕೆಯಿಂದ)

## ಯಾವುದು ಸುಲಭ? ಯಾವುದು ಕಷ್ಟ?

ಎಲ್ಲರಿಗೂ ಈ ಕೆಳಗೆ ತಿಳಿಸಿರುವ ಅಂಶಗಳು ಗೊತ್ತಿರುವುದು. ಆದರೂ ಏಕೆ ಒಳ್ಳೆಯ ಮಾರ್ಗದಲ್ಲಿ ನಡೆಯುವುದಿಲ್ಲ. ಪ್ರಯತ್ನಿಸಿ ಆಚರಣೆಗೆ ತನ್ನಿ.

**ಸುಲಭ**

32 ಒಳ್ಳೆಯ ದಾರಿ ಹಿಡಿಯುತ್ತೇನೆಂದು ಹೇಳುವುದು

33 ಮೇಲೇರುವ ಮಾತುಗಳನ್ನಾಡುವುದು

34 ಇನ್ನೊಬ್ಬರು ಹೇಳಿದ ದಾರಿಯಲ್ಲಿ ನಡೆಯುವುದು

35 ಎಲ್ಲರ ಜೊತೆ ಸ್ನೇಹ ಬೆಳೆಸುವುದು

36 ಸ್ಟೇಜಿನಲ್ಲಿ ಮಾತಾಡಿದವರನ್ನು ಟೀಕಿಸುವುದು

37 ಇತರರೊಂದಿಗೆ ಒಳ್ಳೆಯ ಸಂಬಂಧ ಬೆಳೆಸುವುದು

38 ಇನ್ನೊಬ್ಬರ ಸಹಾಯ ಪಡೆಯುವ ಆಸೆ

39 ಹಿರಿಯರಿಂದ ಗಿಫ್ಟ್ ನಿರೀಕ್ಷಿಸುವುದು

40 ತ್ಯಾಗದ ಬಗ್ಗೆ ಮಾತಾಡುವುದು

41 ನೆನಪುಗಳನ್ನು ಯೋಚಿಸಿ ಖುಷಿಯಾಗಿರುವುದು

42 ಇವೆಲ್ಲವನ್ನೂ ಓದುವುದು

**ಕಷ್ಟ**

32. ಒಳ್ಳೆಯ ದಾರಿ ಹಿಡಿಯುವುದು

33. ಮೇಲೇರಲು ಹೋರಾಟ ಮಾಡುವುದು

34. ತನ್ನ ದಾರಿ ತಾನೇ ಹುಡುಕುವುದು

35. ಸ್ನೇಹಿತರೊಂದಿಗೆ ಒಂದೇ ರೀತಿ ವರ್ತಿಸುವುದು

36. ಸಭಾಕಂಪನವಿಲ್ಲದೆ ಮಾತನಾಡುವುದು

37. ಒಳ್ಳೆಯ ಸಂಬಂಧ ಬೆಳೆಸಲು ಯತ್ನಿಸುವುದು

38. ಇನ್ನೊಬ್ಬರಿಗೆ ಸಹಾಯ ಮಾಡುವುದು

39. ಹಿರಿಯರಿಗೆ ಗಿಫ್ಟ್ ಕೊಡುವುದು

40. ಸ್ವಯಂ ತ್ಯಾಗ ಮಾಡುವುದು

41. ಬರೀ ನೆನಪುಗಳ ಆಧಾರದಲ್ಲಿ ಜೀವಿಸುವುದು

42. ಇವೆಲ್ಲವುಗಳನ್ನು ಆಚರಣೆಗೆ ತರುವುದು.



# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

ಪ್ರೊ. ಬಿ. ನಾರಾಯಣಮ್ಮ





ಶ್ರೀ ಮರಿಮಲ್ಲಯ್ಯ

ಹೊನ್ನೇರು ಪ್ರಾರಂಭವಾಯಿತು. ಸುತ್ತಮುತ್ತಲಿನ ಗ್ರಾಮಸ್ಥರು ಅಲ್ಲಿಗೆ ಬಂದರು. ಗೌಡರು ಏಳು ಜೊತೆ ಹೋರಿಗಳಿಗೆ ನೇಗಿಲುಗಳನ್ನು ಹೂಡಿಸಿ, ಹೋರಿಗಳಿಗೆ ಸಿಂಗಾರ ಮಾಡಿ, ಪೂಜೆ ಮಾಡಿ, ಗ್ರಾಮ ಪ್ರದಕ್ಷಿಣೆ ಮಾಡಿದರು. ತಿಮ್ಮರಾಯಸ್ವಾಮಿ ಗುಡ್ಡದ ಬಳಿ ಭೂಮಿಯನ್ನು ಉಳಲು ಪ್ರಾರಂಭಿಸಿದರು. ರಣಭೈರೇಗೌಡರ ತಮ್ಮ ವೀರಣ್ಣಗೌಡರ ನೇಗಿಲಿಗೆ ಏನೋ ಸಿಕ್ಕಿ ಹಾಕಿಕೊಂಡಿತು. ಹೋರಿಗಳು ಎಷ್ಟು ಜಗ್ಗಿದರೂ ನೇಗಿಲು ಮುಂದೆ ಸಾಗಲಿಲ್ಲ. ಆಗ ಶಾಸ್ತ್ರಿಗಳು, ರಣಭೈರೇಗೌಡರು ಅಲ್ಲಿಗೆ ಬಂದು ಅಲ್ಲಿನ ನೆಲವನ್ನು ಅಗೆಯಿಸಿದರು. ಕಲ್ಲು ಚಪ್ಪಡಿಗಳ ಕೆಳಗೆ ಏಳು ಕೊಪ್ಪರಿಗೆ ಇನ್ನದ ನಾಣ್ಯಗಳು ದೊರೆತವು. ಗೌಡರು ಆ ಹಣದಿಂದ ಕೋಟೆ ಕೊತ್ತಲಗಳನ್ನು ಸುಭದ್ರಗೊಳಿಸಿದರು. ಸುತ್ತಮುತ್ತಲ ಪ್ರಾಂತ್ಯಗಳನ್ನು ತಮ್ಮ ವಶಪಡಿಸಿಕೊಂಡರು. ಹೊಯ್ಸಳ ಸಾಮ್ರಾಟರನ್ನು ಭೇಟಿ ಆಡಿ, ಆ ಪ್ರಾಂತ್ಯಗಳ ಹತೋಟಿಗೆ ಸಾಮ್ರಾಟರ ಅನುಮತಿ ಪಡೆದರು. ಸಾಮ್ರಾಟರು ಗೌಡರಿಗೆ ''ಆವತಿನಾಡ ಪ್ರಭುಗಳು'' ಎಂಬ ಬಿರುದನ್ನಿತ್ತು ಸನ್ಮಾನಿಸಿದರು. ಮಧುಗಿರಿ ಮಿಡಿಗೇಸಿಗಳನ್ನು ವಶಪಡಿಸಿಕೊಳ್ಳಲು ಅನುಮತಿ ಇತ್ತರು. ''ದೆಹಲಿಯ ಸುಲ್ತಾನನು ಹಿಂದೂ ಸಾಮ್ರಾಜ್ಯಗಳನ್ನು ವಶಪಡಿಸಿಕೊಂಡಿದ್ದಾನೆ. ಇಲ್ಲಿಗೂ ದಂಡೆತ್ತಿ ಬರಬಹುದು. ತಾಯ್ನಾಡಿನ ರಕ್ಷಣೆ ಮಾಡಿಸಿ'' ಎಂದು ಹೇಳಿದರು.

**ಮಧುಗಿರಿಯ ಮಾರನಾಯಕ:** ಮಧುಗಿರಿಯನ್ನು ಗಂಗರಸರ ವಂಶದವರಾದ ಹಿರೇಗೌಡರು ಆಳುತ್ತಿದ್ದರು. ಮಾರನಾಯಕನೆಂಬ ಪಾಳೆಯಗಾರನು ಹಿರೇಗೌಡರನ್ನು ಮೋಸದಿಂದ ಕೊಂದು, ಮಧುಗಿರಿಯನ್ನು ತಾನೇ ಆಳಲಾರಂಭಿಸಿದನು. ದರೋಡೆ, ಸುಲಿಗೆ ಮಾಡುತ್ತ ಜನರನ್ನು ಕಾಡುತ್ತಿದ್ದನು. ಮಿಡಿಗೇಸಿಯ ಬೆಂಬಲವಿತ್ತು. ಪ್ರಜೆಗಳು ರಣಭೈರೇಗೌಡರನ್ನು ಮಾರನಾಯಕರ ಕಾಟದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು. ವೀರಣ್ಣಗೌಡರು ಮಧುಗಿರಿಯನ್ನು, ಭದ್ರೇಗೌಡರು ಮಿಡಿಗೇಸಿಯನ್ನು

ಆಕ್ರಮಣ ಮಾಡಲು ಹೊರಟರು. ಮಾರನಾಯಕನ ಸೈನಿಕರು ಕೊಳ್ಳಿ ಹಿಡಿದು ರಾತ್ರಿ ನಿದ್ರೆಯಲ್ಲಿದ್ದ ಗೌಡರ ಸೈನಿಕರನ್ನು ಕೊಲ್ಲಲು ಬರುತ್ತಿದ್ದುದನ್ನು ನೋಡಿದ ವೀರಣ್ಣಗೌಡರು ತಮ್ಮ ಶಿಬಿರಗಳಲ್ಲಿದ್ದ ಸೈನಿಕರನ್ನು ಎಬ್ಬಿಸಿ, ಬಿಲ್ಲುಬಾಣ ಸಮೇತ ಎತ್ತರವಾದ ಮರಗಳನ್ನೇರಿ ಕುಳಿತುಕೊಳ್ಳಲು ಹೇಳಿದರು. ಸೈನಿಕರ ಶಿಬಿರಗಳಲ್ಲಿ ಯಾರೂ ಇಲ್ಲದ್ದನ್ನೇ ನೋಡಿ ಕಕ್ಕಾಬಿಕ್ಕಿಯಾದ ಮಾರನಾಯಕನ ಕೊಂದು ಮಧುಗಿರಿಯನ್ನು ವೀರಣ್ಣಗೌಡರು ವಶಪಡಿಸಿಕೊಂಡರು. ಭದ್ರೇಗೌಡರೂ ಸಹ ಮಿಡಿಗೇಸಿಯನ್ನು ವಶಪಡಿಸಿಕೊಂಡರು. ಪಾಳೆಯಗಾರರ ಕಾಟ ತಪ್ಪಿಸಿದ್ದಕ್ಕಾಗಿ ಜನರು, ಮುಖಂಡರು ವೀರಣ್ಣಗೌಡರನ್ನು, ಭದ್ರೇಗೌಡರನ್ನು ಅಭಿನಂದಿಸಿದರು.

### ದೊಡ್ಡಾಂಬೆ

ದೊಡ್ಡಾಂಬೆಯು ಯಾರನ್ನೂ ವಿವಾಹವಾಗಲು ಇಚ್ಛಿಸಲಿಲ್ಲ. ತಾನು ಬದುಕಿದ್ದರೆ, ತನ್ನನ್ನು ವಿವಾಹವಾಗಲಿಚ್ಛಿಸುವವರಿಗೆ ತಂದೆಯು ಇಲ್ಲವೆನ್ನಬೇಕಾಗಬಹುದು. ಇದರಿಂದ ಮನಸ್ತಾಪ, ವೈರತ್ವಕ್ಕೆ ಕಾರಣವಾಗಬಹುದೆಂದು ಭಾವಿಸಿ, ಒಂದು ಪತ್ರವನ್ನು ಬರೆದಿಟ್ಟು, ಶುಕ್ರವಾರ ಕೆಂಪಾಂಬಿಕೆಯ ದೇವಾಲಯಕ್ಕೆ ಹೋಗಿ, ಅಲ್ಲಿ ಪೂಜೆ ಸಲ್ಲಿಸಿ, ದೇವಿಯಲ್ಲಿ ಐಕ್ಯಳಾದಳು. ರಣಭೈರೇಗೌಡರಿಗೆ, ಅವರ ಪತ್ನಿ ಲಕ್ಷ್ಮಮ್ಮನವರಿಗೆ ಬಹಳ ಚಿಂತೆಯಾಯಿತು. ಅವರ ಕನಸಿನಲ್ಲಿ ದೊಡ್ಡಾಂಬೆ ಕಾಣಿಸಿಕೊಂಡು "ನಾನು ಸದಾಕಾಲ ನಿಮ್ಮೊಡನೆಯೇ ಇರುತ್ತೇನೆ. ನಿಮ್ಮನ್ನು ನಾಡನ್ನು ರಕ್ಷಿಸುತ್ತೇನೆ" ಎಂದು ಹೇಳಿದಳು.

ವಿಜಯನಗರ ಸಾಮ್ರಾಜ್ಯ ಕ್ರಿ.ಶ. 1342ರಲ್ಲಿ ಹಿಂದೂ ಸಾಮ್ರಾಜ್ಯದ ಕೊನೆಯ ದೊರೆಯಾದ ಹೊಯ್ಸಳೇಶ್ವರ ಮುಮ್ಮಡಿ ವೀರಬಲ್ಲಾಳನು ತಿರುಚಿನಾಪಳ್ಳಿಯಲ್ಲಿದ್ದಾಗ, ದೆಹಲಿಯ ಸುಲ್ತಾನನ ಕಡೆಯವರು ಆತನನ್ನು ಮೋಸದಿಂದ ಹತ್ಯೆಗೈದರು. ಹಿಂದೂ ಸಾಮ್ರಾಜ್ಯ ಈ ರೀತಿ ಅಂತ್ಯಗೊಂಡಿತು. ಆಗ ಹೊಯ್ಸಳೇಶ್ವರರ ಮುಮ್ಮಡಿ ವೀರಬಲ್ಲಾಳನ ಮಹಾಮಂಡಲೇಶ್ವರರಾಗಿದ್ದ ಹರಿಹರ ಮತ್ತು ಬುಕ್ಕರು, ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಆನೆಗೊಂದಿಯಲ್ಲಿದ್ದ ಯವನರನ್ನು ಸೋಲಿಸಿ, ಓಡಿಸಿ, ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆಗ ರಣಭೈರೇಗೌಡರೂ, ಇತರರಂತೆ, ವಿಜಯನಗರ ಸಾಮ್ರಾಜ್ಯದ ಮಾಂಡಳಿಕರಾದರು. ರಣಭೈರೇಗೌಡರು ರಾಜ್ಯವನ್ನು ವಿಭಾಗಿಸಿದ್ದು, ರಣಭೈರೇಗೌಡರು ತಮ್ಮ ಆರುಮಂದಿ ತಮ್ಮಂದಿರಿಗೆ ಹಾಗೂ ಮಕ್ಕಳಿಗೆ ಈ ರೀತಿ ರಾಜ್ಯವನ್ನು ಹಂಚಿದರು.

*(ಮುಂದುವರಿಯುವುದು)*

### ನಗೆಹನಿ

ಪತ್ನಿ (ಮೊಬೈಲಿನಲ್ಲಿ): ಹಲೋ, ಎಲ್ಲಿದ್ದೀರಿ ನೀವು?

ಪತಿ: ಆಫೀಸಿನಲ್ಲಿ, ನೀನು?

ಪತ್ನಿ: ಹೊಟೇಲಿನಲ್ಲಿ. ನೀವು ಕೂತಿರುವ ಟೇಬಲ್ಲಿಂದ ನಾಲ್ಕು ಟೇಬಲ್ ಹಿಂದುಗಡೆ... ಮತ್ತೆ ಪುಟ್ಟಾ ಕೇಳ್ತಾ ಇದ್ದಾನೆ 'ಅಪ್ಪನ ಜೊತೆಗೆ ಇರೋ ಆಂಟಿ ಯಾರೂಂತ...'!



## ತಲಕಾಡಿನ ಗಂಗರು (ಕ್ರಿ.ಶ. 350-999)

ಕ್ರಿ.ಶ. 975ರಲ್ಲಿ ಸಂಭವಿಸಿದ ಆಂತರಿಕ ಕದನದಲ್ಲಿ ನಾಲ್ಕನೆ ರಾಚಮಲ್ಲನು ಸಿಂಹಾಸನ ಪಡೆಯುವಲ್ಲಿ ಚಾವುಂಡರಾಯನ ಪಾತ್ರ ಪ್ರಮುಖವಾಗಿದ್ದಿತು. ಅಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ದಂಡನಾಯಕನಾಗಿದ್ದು ಗಂಗರಾಜ್ಯವನ್ನು ರಕ್ಷಿಸಿದ ಕೀರ್ತಿ ಇವನಿಗೇ ಸೇರಬೇಕಾದುದು. ಚಾವುಂಡರಾಯನ ಪುರಾಣದಲ್ಲಿ ಅವನ ಸೇನಾ ಸಾಧನೆಗಳ ಒಂದು ಪಟ್ಟಿಯನ್ನೇ ಕಾಣಬಹುದಾಗಿದೆ. ಅತ್ಯಂತ ಪ್ರಾಮಾಣಿಕನಾದ ಇವನಿಗೆ ಗಂಗ ಅರಸರು ಇತ್ತ ಅನ್ವರ್ಥ ಬಿರುದು 'ಸತ್ಯ ಯುಧಿಷ್ಠಿರ'. ವಿದ್ವಾಂಸನಾದ ಚಾವುಂಡರಾಯ ಸಂಸ್ಕೃತದಲ್ಲಿ 'ಚರಿತ್ರಸಾರ', ಕನ್ನಡದಲ್ಲಿ 'ಚಾವುಂಡರಾಯ ಪುರಾಣ' ಅಥವಾ 'ತ್ರಿಷಷ್ಠಿ ಲಕ್ಷಣ ಮಹಾಪುರಾಣ' ಮೊದಲಾದ ಗ್ರಂಥಗಳನ್ನು ರಚಿಸಿದ್ದಾನೆ. ವ್ಯಾಕರಣ ಪಂಡಿತ ಗುಣವರ್ಮ ಮತ್ತು ಕನ್ನಡದ ಹೆಸರಾಂತ ಕವಿ ರನ್ನನೂ ಇವನ ಆಶ್ರಯ ಪಡೆದಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಇವನ ಹೆಸರನ್ನು ಅಮರಗೊಳಿಸಿದ ಮಹತ್ಸಾಧನೆ ಎಂದರೆ ಶ್ರವಣಬೆಳಗೊಳದಲ್ಲಿ ದೊಡ್ಡಬೆಟ್ಟದ ಮೇಲೆ ಕ್ರಿ.ಶ. 981-82ರಲ್ಲಿ ನಿರ್ಮಿಸಿರುವ ಗೊಮ್ಮಟೇಶ್ವರನ (ಬಾಹುಬಲಿ) ವಿಗ್ರಹ. ಇದೇ ಸ್ಥಳದಲ್ಲಿ ಚಾವುಂಡರಾಯ ಬಸ್ತಿಯನ್ನು ಅವನ ಮಗ ಜಿನದೇವ ನಿರ್ಮಿಸಿದಂತೆ ಕಂಡುಬರುತ್ತದೆ. ಚಾವುಂಡರಾಯನ ಮೊದಲ ಹೆಸರು ಚಾವುಂಡರಾಜ. ಅವನ ಧರ್ಮಕಾರ್ಯಗಳಿಗೆ ಮೆಚ್ಚಿದ ರಾಚಮಲ್ಲನು ಅವನಿಗೆ 'ರಾಯ' ಎಂಬ ಬಿರುದನ್ನಿತ್ತು ಗೌರವಿಸಿದನು. ಅಂದಿನಿಂದ ಚಾವುಂಡರಾಜನು ಚಾವುಂಡರಾಯನಾದನು.

### ಸಾಂಸ್ಕೃತಿಕ ಕೊಡುಗೆಗಳು

ಗಂಗರು ಸುಮಾರು ಆರು ಶತಮಾನಗಳಿಗೂ ಹೆಚ್ಚು ಕಾಲ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ್ದರು. ಕರ್ನಾಟಕವನ್ನು ಏಕಸೂತ್ರದಲ್ಲಿಡುವ ಪ್ರಯತ್ನ ಅವರದಾಗಿತ್ತು. ಈ ಅವಧಿಯಲ್ಲಿ ಕರ್ನಾಟಗದ ಸಂಸ್ಕೃತಿ ವಿಪುಲವಾಗಿ ಬೆಳೆಯಲು ಬೇಕಾದ ಎಲ್ಲ ಸೌಲಭ್ಯವನ್ನು ಒದಗಿಸಿಕೊಟ್ಟು ಇತರರಿಗೆ ಮಾರ್ಗ ತೋರಿದ್ದಾರೆ.

### ಧರ್ಮ

ಗಂಗರು ಜೈನಮತಾವಲಂಬಿಗಳು. ಆದರೂ ಎಲ್ಲ ಅರಸರೂ ಪರಮತಸಹಿಷ್ಣುಗಳಾಗಿದ್ದು ಅವುಗಳನ್ನು ಸಮಾನದೃಷ್ಟಿಯಿಂದ ನೋಡುತ್ತಿದ್ದರು. ಜನರಿಗೆ ಧಾರ್ಮಿಕ ಸ್ವಾತಂತ್ರ್ಯವಿದ್ದಿತು. ಈ ಸೌಲಭ್ಯದಿಂದ ವಿವಿಧ ಧರ್ಮಗಳು ಪ್ರಗತಿ ಹೊಂದಲು ಸಾಧ್ಯವಾಯಿತು. ಜೈನ, ಹಿಂದೂ ಮತ್ತು ಬೌದ್ಧಧರ್ಮಗಳು ಪ್ರಮುಖವಾಗಿದ್ದವು. ಬೌದ್ಧಧರ್ಮ ಜೈನಧರ್ಮದಷ್ಟು ಖ್ಯಾತಿ ಪಡೆದಿರಲಿಲ್ಲ. ಜೈನಧರ್ಮ ರಾಜಾಶ್ರಯ ಪಡೆದಿದ್ದುದೇ ಇದಕ್ಕೆ ಕಾರಣವಿರಬೇಕು. ಗಂಗರು ಅಪ್ರಮುಖರಾದಂತೆ ಜೈನಧರ್ಮವೂ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡಿತು.

*(ಮುಂದುವರೆಯುವುದು)*

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ರಾಜೇಶ್ವರಿ, ಮೈಸೂರು**
ಪಕ್ಕದ ಮನೆ ಸಾರು ಹುಳಿ, ಗೊಜ್ಜನ್ನು ಲೊಟ್ಟೆ ಹೊಡ್ಕೊಂಡು ತಿನ್ನೋರ್ಗೆ ಏನು ಮಾಡಬೇಕು?
-ಮೊದಲು ಪಕ್ಕದ್ಮನೆ ಗೊಜ್ಜು ಮಾಡಿರೋ ಹೆಂಗಸು ಕಣ್ಣಿಗೆ ಬೀಳದ ಹಾಗೆ ನೋಡ್ಕೋಬೇಕು.

**ಸುನಿಲ್, ಚಿಕ್ಕಮಗಳೂರು**
ಮದುವೆ ಆದ ಗಂಡಸು ಅತ್ತೆ ಮನೆ ಸೇರುವುದು ಕಡ್ಡಾಯವಾದೆ ಏನಾಗುತ್ತದೆ?
-ಸುಂದರವಾಗಿರೋ ಅತ್ತೆರನ್ನ ಮಾವಂದಿರು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾಗುತ್ತದೆ.

**ಸಂಜಯ್, ಶಿವಮೊಗ್ಗ**
ಬುಗುರಿ ಆಡಿಸಲು ಚಾಟಿ ಬೇಕು, ರಾಜಕೀಯ ನಾಯಕರನ್ನು ಆಡಿಸಲು ಏನು ಬೇಕು?
-ಕೋಟಿ ಕೋಟಿ ಬೇಕು.

**ಬಂಗಾರು, ಮಂಗಳೂರು**
ಹೆಣ್ಣಿನ ಕುಡಿನೋಟಕ್ಕೂ ಗಂಡಿನ ತುಂಟಾಟಕ್ಕೂ ಇರುವ ವ್ಯತ್ಯಾಸವೇನು?
-ಹೆಣ್ಣಿನ ಕುಡಿನೋಟ ವೈರಸ್, ಗಂಡಿನ ತುಂಟಾಟ ಬರೀ ಸರ್ಕಸ್.

**ಸಂತೋಷ್, ಬಳ್ಳಾರಿ**
ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಪ್ರತಿನಿಧಿಗಳ ಜೊತೆ ಅವರ ಗಂಡಂದಿರೂ ಇರುತ್ತಾರಲ್ಲ ಏಕೆ?
-ಯಾವುದಾದರೂ ಅನು'ದಾನ' ತಮಗೆ ಗೊತ್ತಿಲ್ಲದೇ ಕೊಟ್ಟುಬಿಡ್ತಾರೆ ಅನ್ನೋ ಸಂಶಯವಷ್ಟೆ.

**ಚಂದ್ರು, ಕೋಲಾರ**
ಕೆಲವು ಗಂಡಸರು ತಮ್ಮ ಹೆಂಡತಿಗೆ ಹೆದರಲು ಕಾರಣವೇನು?
-ಅಡ್ಡಾದಿಡ್ಡಿ ಬೈಕ್ ಓಡಿಸುವವರು ಟ್ರಾಫಿಕ್ ಪೊಲೀಸ್‌ಗೆ ಹೆದರುವುದು ಸಹಜ. ಇದೂ ಅದೇ ರೀತಿ ಅಷ್ಟೆ.

**ಮಮತಾ, ತಿಪಟೂರು**
ಹೆಣ್ಣಿಗೆ ಕಂಠ ಮುಖ್ಯವೋ, ಸೊಂಟ ಮುಖ್ಯವೋ?
-ಮದುವೆಗೆ ಮೊದಲು ಸೊಂಟ ಮುಖ್ಯ, ನಂತರ ಗಂಡ-ಮಕ್ಕಳೊಡನೆ ಅರಚಾಡಲು ಕಂಠ ಮುಖ್ಯ.

**ನಮ್ರತಾ, ಮೈಸೂರು**
ಒಂದೊಂದು ದೇವರಿಗೂ ಅಷ್ಟೊಂದು ಹೆಸರುಗಳು ಏಕೆ?
-ಹಾಗೇನಿಲ್ಲ, ನಾಮಪದಗಳು ಒಂದೊಂದೇ, ಉಳಿದವೆಲ್ಲಾ ಗುಣವಾಚಕಗಳು.

**ಸುಶೀಲಾ, ಮಂಡ್ಯ**
ವಿದ್ಯೆ ಎಂಬ ಸಾಗರ, ಈಜಲು ಬಹು ಬೇಸರ. ಏನು ಮಾಡಲಿ?
-ಈಜಿ ದಡ ಸೇರಿದರೆ ಜೀವನವೇ ಸುಖಸಾಗರ, ಯೋಚಿಸಿ.

**ನೀಲಾಂಬಿಕೆ, ಮೈಸೂರು**
ಪೊಲೀಸ್‌ಗೂ ಟೀಚರ್‌ಗೂ ಏನು ವ್ಯತ್ಯಾಸ?
-ಟೀಚರ್ ಒದ್ದು ಹೊರಗೆ ಹಾಕ್ತಾರೆ. ಪೊಲೀಸರು ಒಳಗೆ ಹಾಕಿ ಒದೀತಾರೆ, ಅಷ್ಟೆ.

**ನಂದಿತ, ದಾವಣಗೆರೆ**
ರಕ್ತ ಸಂಚಾರಕ್ಕೂ, ವಾಹನ ಸಂಚಾರಕ್ಕೂ ಇರುವ ವ್ಯತ್ಯಾಸವೇನು?
-ರಕ್ತ ನಿಗದಿತ ಮಾರ್ಗದಲ್ಲೇ ಸಂಚರಿಸುತ್ತದೆ. ವಾಹನ ಹಾಗಲ್ಲ. ನಿಮಗೆ ಗೊತ್ತಿರಬೇಕಲ್ಲ.

**ದಿನೇಶ್, ಕನಕಪುರ**
ಎಲ್ಲಾ ಗಂಡಸರೂ ತಮ್ಮ ಜೇಬಿನಲ್ಲಿರುವ ಪರ್ಸ್‌ನಲ್ಲಿ ಹೆಂಡತಿಯ ಫೋಟೋ ಇಟ್ಟಿರುವುದೇಕೆ?
-ಪರ್ಸ್ ಏಕೆ ಖಾಲಿಯಾಗಿದೆ ಎಂದು ಯಾರಾದರೂ ಕೇಳಿದರೆ ಕಾರಣ ತೋರಿಸೋದಿಕ್ಕೆ.





# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ಚಿತ್ರಗುಪ್ತ: ಅಂದರೆ...

ನಾರಾಯಣ: ನಮ್ಮಲ್ಲಿ ಇಡ್ಲಿ, ದೋಸೆ, ಚಪಾತಿ, ವಡೆ, ತೊಡೆ, ಕುರಿ, ಕೋಳಿ ಇತ್ಯಾದಿ ಸಿಗುತ್ತೆ. ನಿಮಗೇನ್ಬೇಕು? ಜೊತೆಗೆ ಬ್ರಾಂದಿ, ವಿಸ್ಕಿ, ರಂ, ಸಾರಾಯಿ, ಮದ್ಯಪಾನಗಳು ಸಿಗುತ್ತೆ.

ಚಿತ್ರಗುಪ್ತ: ಏನಾದ್ರೂ ತಂದ್ಕೊಡಯ್ಯ ಹೊಟ್ಟೆ ಹಸೀತಾ ಇದೆ. ಮಲ್ಕೊಳಕ್ಕೆ ಒಂದು ಕೋಣೆ ಬೇಕು ಅಂತ್ಹೇಳಿ ಕೆಲವು ಬಂಗಾರದ ವರಹಗಳನ್ನು ನಾರಾಯಣನ ಕೈಗೆ ಕೊಟ್ಟ.

ನಾರಾಯಣ: ಚಿತ್ರಗುಪ್ತರು ನೀಡಿದ ವರಹಗಳನ್ನು ತೆಗೆದುಕೊಂಡು ಹೋಗಿ ಮಾರ್ವಾಡಿ ಅಂಗಡೀನಲ್ಲಿ ಅಡ ಇಟ್ಟ. ಒಂದು ಐವತ್ತು ಸಾವಿರ ರೂಪಾಯಿ ತೊಗೊಂಡು ಅವನ ಹತ್ರ ಇಟ್ಕೊಂಡಿದ್ದ. ಚಿತ್ರಗುಪ್ತರಿಗೆ ಎಲ್ಲ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟ.

ರಾಮಾಶಾಸ್ತ್ರಿಗಳು: ಆಸ್ಪತ್ರೆಯಲ್ಲಿ ಮಲಗಿರುವ ಮಗನನ್ನು ನೋಡಿಕೊಳ್ಳುತ್ತಾ, ಡಾಕ್ಟ್ರೇ ನನ್ನ ಮಗನ ಆರೋಗ್ಯ ಸರಿಯಾಗುತ್ತಾ? ಮುಂಚಿನ ಹಾಗೆ ಓಡಾಡಿಕೊಂಡಿರ್ತಾನಾ?

ಡಾಕ್ಟ್ರು: ಯಾಕೆ ಶಾಸ್ತ್ರಿಗಳೆ ಇಷ್ಟು ಚಿಂತೆ ಮಾಡ್ತೀರಿ? ನಾವು ಪ್ರತೀದಿನವೂ ನಿಮ್ಮ ಮಗನ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದೇವೆ. ಗುಣಮುಖನಾಗಬಹುದು. ಏನೂ ಗಾಬ್ರಿ ಬೀಳ್ಬೇಡಿ ಎಂದು ಸೂಜಿಯಿಂದ ರಾಮಸಿಂಹಯ್ಯನ ತೋಳಿಗೆ ಇಂಜೆಕ್ಷನ್ ನೀಡಿ ಸಮಾಧಾನ ಪಡಿಸಿ ಹೋದರು.

ನಾರದ: ನ ಆರಾಯಣ, ನಾರಾಯಣ, ನಾರಾಯಣ ಅಂತ ದೇವಲೋಕದ ರಸ್ತೆಯಲ್ಲಿ ಸಂಚಾರ ಮಾಡುತ್ತಾ ಅಕಸ್ಮಾತ್ ಯಮಪುರಿ ಪ್ರವೇಶಿಸಿದರು. ನಾರಾಯಣ ನಾರಾಯಣ ಯಮರಾಜನ ಆಸ್ಥಾನಕ್ಕೆ ಪ್ರವೇಶಿಸಿದರು. ಯಮ ಸಿಂಹಾಸನದ ಮೇಲೆ ಏನೋ ಕಳೆದುಕೊಂಡವನಂತೆ ತಲೆಯ ಮೇಲೆ ಕೈಹೊತ್ತು ದೇವೇಗೌಡ್ರು ತರ ನಿದ್ದೆಯಲ್ಲೇ ಮುದ್ದೆಯನ್ನು ತಿಂದು ಸಿಂಹಾಸನದ ಮೇಲೆ ಹಾಗೆಯೇ ಒರಗಿಕೊಂಡಿರುವುದನ್ನು ನೋಡಿದ ನಾರದರು ಎಲ್ಲಾ ಎಮ್ಮೆ ಎಂದು ಕೂಗಿಬಿಟ್ಟರು.

ಯಮ: ನಾರದರ ಮಾತಿನಿಂದ ಗಾಬರಿಗೊಂಡು ಚಿರ್‍ರನೆ ಚೀರಿ ನಾರದರಿಗೆ ನಮಸ್ಕಾರ. ನಾರದರೇ ಈ ನರಕೀಟದ ಬಾಧೆಯಿಂದ ಚಿಂತೆಗೆ ಒಳಗಾಗಿದ್ದೇನೆ. ಇದಕ್ಕೆ ಪರಿಹಾರ ಇನ್ನೂ ಕಾಣಲಿಲ್ಲ.

ರಾಮಸಿಂಹಯ್ಯ: ನಿನ್ಮನೆ ಹಾಳಾಗೋಗ. ಯಕ್ಕುಟ್ಟೋಗ ನನ್ನ ಬಾಡೀನ ಯಾವ್ನೋಳ್ಕೈಲೋ ಕೊಟ್ಬುಟ್ಟು ಅವಳು ಅವಳ ಬಾಡೀ ಒಳ್ಗೆ ಮುಚ್ಚಿ ಮಡೀಕೊಳಂಗೆ ಮಾಡ್ಬುಟ್ಟು ಪೆದ್ದೆದ್ದಂಗೆ ನಾಟ್ಕ ಮಾಡ್ತೌನೆ. ಇವನ್ಗೆ ನಾಲಕ್ ಇಕ್ಕಿದ್ರೆ ಅವಳ ಬಾಡೀಯಿಂದ ಕಕ್ಕಿಸ್ಬೇಕಾಗತ್ತೆ. ಅಯ್ಯೋ ಸಂಚಾರಿ ಅವ್ಳು ಯಾರೂಂತ ನೀನು ಹೇಳು, ಅವಳ ತೌಕೆ ಹೋಗಿ ಕೇಳ್ಬುಡ್ತೀನಿ.

ನಾರದ: ರಾಮಸಿಂಹಯ್ಯನವ್ರೆ ಅದೇನೋ ಬಾಡಿ ಗೀಡಿ ಅಂದ್ರಲ್ಲ. ಸಿಂಹ ಸಿಕ್ಸ್‌ನಲ್ಲಿ ಸಿಗತ್ತಾ ಇಲ್ಲ ಕೋ-ಆಪ್ಟೆಕ್ಸ್‌ನಲ್ಲಿ ಸಿಗುತ್ತ. ಇಲ್ಲ ರೇಷ್ಮೆ ಕಾರ್ಖಾನೇನಲ್ಲಿ ನೇಯ್ತಾರಾ, ಇಲ್ಲಿ ಫುಟ್‌ಪಾತ್‌ನಲ್ಲಿ ಹಾಕ್ಕೊಂಡು ಮಾರ್ತಾರಲ್ಲ ಅಲ್ಲೇನಾರೂ... ಸಿಗುತ್ತಾ ಬಾಡಿ.

ರಾಮಸಿಂಹಯ್ಯ: ಬಾಡಿ ಬಾಡಿ ಅಂತ ಹೊಡ್ಕೊತ್ಯಲ್ಲೋ ಬೇರ್ ಬಾಡಿ.

ಯಮ: ನಾರದರೆ ಅದೇನದು ಬೇರ್‌ಬಾಡಿ ಅಂದ್ರಿ. ಅದೇನು ಶ್ರವಣಬೆಳಗೊಳದಲ್ಲಿ ಸಿಗುತ್ತಾ?

ರಾಮಸಿಂಹಯ್ಯ: ಈ ನನ್ಮಕ್ಳಬ್ರನ್ನ ಶ್ರವಣಬೆಳಗೊಳದಲ್ಲಿ ನಿಲ್ಸದೆ ಕರೆಕ್ಟ್.

ನಾರದ: ಯಮರಾಜ ನಾವು ಕಾಲಹರಣ ಮಾಡುತ್ತಿದ್ದೇವೆ. ಓ...ಹೋ... ಚಿತ್ರಗುಪ್ತರು ಕಾಣಿಸ್ತಾ ಇಲ್ವಲ್ಲ ಎಲ್ಲಿತ್ತೊಲಗ್ದ ಆ ದಂಡಪಿಂಡ?

ಯಮ: ಪೂಜ್ಯರೇ ನಾನು ಅದೇ ಫೀಲಿಂಗ್‌ನಲ್ಲಿದ್ದೀನಿ. ಆ ಮುಂಡೇಗಂಡ ಇದ್ದಿದ್ರೆ ಇವತ್ತಿನ ಕೆಲ್ಸಾನಾದ್ರೂ ನಡೆಯೋದು.

ರಾಮಸಿಂಹಯ್ಯ: ಹಲೋ ಯಮ, ಚಿಟಿಕೆ ಹೊಡೆದು ನೋಡು ನನ್ಬಾಡಿ ನನ್ಗೆ ಕೊಡ್ಲಿಲ್ಲಾಂದ್ರೆ ನಾಳೆಯಿಂದ ಮುಷ್ಕರ ಗ್ಯಾರಂಟಿ. ಯಾರ್ಬಂದ್ರೂನೂವೆ ನನ್ನನ್ನ ಅಲ್ಲಾಡ್ಸಕ್ಕಾಗಲ್ಲ. ಇಗೋ ವಾರ್ನಿಂಗ್ ತಿಳೀತಾ.

ನಾರದ: ನಾರಾಯಣ ನಾರಾಯಣ ನೀವಿಬ್ರೂ ಏನು ಬೇಕಾದ್ರೂ ಮಾಡ್ಕೊಳಿ. ಇಂದ್ರನ ಲೋಕ್ದಲ್ಲಿ ಕ್ಯಾಬ್ರೆ ಡ್ಯಾನ್ಸ್ ಇದೆ. ನಾನು ನೋಡಕ್ಕೆ ಹೋಗ್ತೀನಿ.

ರಾಮಸಿಂಹಯ್ಯ: ನಾರದರೇ ಕ್ಯಾಬ್ರೆ ಡ್ಯಾನ್ಸ್ ಅಲ್ಲಾ ಅದು. ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆ, ಮಹಾನ್ ಕಲಾವಿದರ ನೃತ್ಯ

ನಾರದ: ಶ್ ಶ್ ಶ್ ಸದ್ದು. ಬಾಯ್ಬಿಟ್ರೆ ಅಷ್ಟೆ ಕಥೆ ಫಿನಿಶ್.

ಯಮ: ನಾರದರೇ ಅದೇನೋ ಫಿಶ್ ಫಿಶ್ ಫಿಶ್ ಅಂದ್ರಲ್ಲ ಅದೇನು ಮಲ್ಪೆ ಸಮುದ್ರದಲ್ಲಿ ಸಿಗುತ್ತಾ ಅಥವಾ ಗೋವಾ ಬೀಚ್‌ನಲ್ಲಿ ಸಿಗುತ್ತಾ. ಹಾಗಾದ್ರೆ ನಡೀರಿ ಹೋಗೋಣ.

ರಮ್ಯ: ಪಾರ್ಟಿ ಮುಗುಸ್ಕೊಂಡು ಮನೆಗೆ ರಾತ್ರಿ ಹತ್ತುಗಂಟೆಗೆ ಬಂದ್ಲು.

ಸೀತಮ್ಮ: ಅವಳ ತಾಯಿ ಸೀತಮ್ಮ ಏನೇ ನಿಂಗೆ ಬುದ್ಧಿ ನಿದೆಯೋ ಇಲ್ವೋ. ಅಕ್ಕ-ಪಕ್ಕ ನೋಡ್ದೋರು ಏನನ್ಕೋತಾರೆ ನಮ್ಮಾನ ಕಳೆಯಕ್ಕೆ ಈ ರೀತಿ ಮಾಡ್ತಾ ಇದ್ಯಾ.

ರಮ್ಯ: ಅಮ್ಮಾ ನಾನು ಒಂದ್ಕೆಲ್ಸಕ್ಕೆ ಅರ್ಜಿ ಹಾಕಿದ್ದೆ. ಕೆಲ್ಸ ಸಿಕ್ತು. ಆ ಸಂದರ್ಭದಲ್ಲಿ ಸಂತೋಷ ಹಂಚಿಕೊಳ್ಳಲು ಪಾರ್ಟಿಗೆ ಹೋಗ್ಬೇಕಾಯ್ತು. ಪ್ರಾಣಕ್ಕಿಂತ ಮಾನ ಮುಖ. ಆ ತರಹ ಮಾನ ಹೋಗುವ ಕೆಲ್ಸ ಮಾಡಲ್ಲ. ಎಲ್ಲರ ಜೊತೆಯಲ್ಲೂ ಬೆರೀಬೇಕು. ನಮ್ಮ ಬುದ್ಧಿಯೂ ನಮ್ಮ ಕೈಲಿರಬೇಕು. ಎರಡನ್ನೂ ಅರಿತುಕೊಂಡಿದ್ದೇನೆ. ಅಪ್ಪನ ಪೆನ್ಷನ್ನು, ಅಣ್ಣನ ಆರೋಗ್ಯ ಜೀವನ ನಿರ್ವಹಣೆ ನೋಡಬೇಕಲ್ಲಾ. ಅದಕ್ಕಾಗಿ ನಾನು ಕೆಲಸಕ್ಕೆ ಹೋಗ್ತಿದೀನಿ. ಅದು ಲೆಕ್ಕ ಬರೆಯುವ ವೃತ್ತಿ. ನಾನು ಓದಿದ ಸಬ್ಜೆಕ್ಟ್ ಕಾಮರ್ಸ್ ತಾನೆ.

ಯಮ: ರಾಮನಸಿಂಹಯ್ಯನ ಗಲಾಟೆ ಹೆಚ್ಚಾಯಿತು. ಇವನ ಗಲಾಟೆಯಿಂದ ಯಮಲೋಕದಲ್ಲಿ ನೆಮ್ಮದಿಯಾಗಿ ಯಾರೂ ಬಾಳಲು ಸಾಧ್ಯವಾಗುತ್ತಿಲ್ಲ. ಈ ವಿಚಾರವನ್ನು ಬ್ರಹ್ಮನಲ್ಲಿ ಅರಿಕೆ ಮಾಡಲು ಸಭೆಯಿಂದ ಹೊರನಡೆದನು.

ಭೂತ-ಪ್ರೇತ: ಯಮಲೋಕದಲ್ಲಿ ಆದ ಇಂದಿನ ಸಭೆಯಲ್ಲಿ ಗಲಾಟೆಯಿಂದ ಭೂತ-ಪ್ರೇತ ಪಿಶಾಚಿಗಳಿಗೆ ಒಂದು ದಿನದ ಸ್ವಾತಂತ್ರ್ಯ ಸಿಕ್ಕಿತು. ಪಿಶಾಚಿಗಳೆಲ್ಲವೂ ಪತ್ರಕರ್ತ ರಾಮಸಿಂಹಯ್ಯನಿಗೆ ಜೈಕಾರ ಹಾಕಿದವು. ಪಿಶಾಚಿಗಳು ತಮ್ಮ ತಮ್ಮ ಬಂಧುಬಳಗದೊಂದಿಗೆ ಸಂತಸವನ್ನು ಹಂಚಿಕೊಂಡವು.

*(ಮುಂದುವರೆಯುವುದು)*





# ಸಹಾಯ

ಮಧ್ಯಾಹ್ನದ ಸಮಯ. ಇಂಗ್ಲೆಂಡಿನ ಹಳ್ಳಿಯೊಂದರ ಹೊಲದಲ್ಲಿ ರೈತನೊಬ್ಬ ಕೆಲಸದಲ್ಲಿ ತೊಡಗಿದ್ದ. ಎಲ್ಲಿಂದಲೋ ಮಗುವೊಂದು ಚೀರಿದ ಶಬ್ದ ಕೇಳಿಸಿತು. 'ಅಯ್ಯೋ, ಕಾಪಾಡಿ, ಕಾಪಾಡಿ' ಎಂದು ಕೂಗಿಕೊಳ್ಳುತ್ತಿದ್ದ. ರೈತ ತನ್ನ ಕೆಲಸ ನಿಲ್ಲಿಸಿ ಅತ್ತ ಓಡಿದ. ಪಕ್ಕದಲ್ಲಿದ್ದ ಕೆರೆಯೊಂದರ ಕೆಸರಿನಲ್ಲಿ ಹುಡುಗನೊಬ್ಬ ನಿಧಾನವಾಗಿ ಮುಳುಗುತ್ತಿದ್ದ. ಹುಡುಗ ಗಾಬರಿಯಾದಂತಿತ್ತು. ರೈತ ತನ್ನ ಬಳಿಯಿದ್ದ ವಸ್ತ್ರವನ್ನು ಆತನ ಬಳಿ ಬಿಸಾಕಿ ಹೊರಗೆ ಎಳೆದು ಕೆಸರಿನಿಂದ ರಕ್ಷಿಸಿದ. ಮೈಕೈಗೆ ಮೆತ್ತಿದ ಕೆಸರನ್ನು ನೀರಿನಿಂದ ತೊಳೆದ. ಹುಡುಗ ಧನ್ಯವಾದ ಅರ್ಪಿಸಿದ. ರೈತನ ಹೆಸರು ತಿಳಿದುಕೊಂಡು ಹೊರಟುಹೋದ.

ಮರುದಿನ ಬೆಳಿಗ್ಗೆ ತನ್ನ ತಂದೆಯೊಂದಿಗೆ ರೈತನ ಗುಡಿಸಿಲಿನ ಮುಂದೆ ಹುಡುಗ ಹಾಜರಾದ. ಶ್ರೀಮಂತ ತಂದೆ ಮಗನನ್ನು ಕಾಪಾಡಿದ್ದಕ್ಕಾಗಿ ಧನ್ಯವಾದ ಹೇಳಿದ. 'ನೀವು ನನ್ನ ಮಗನನ್ನು ಕಾಪಾಡಿದ್ದೀರಿ. ನಿಮಗೆಷ್ಟು ಹಣ ಬೇಕು ಕೇಳಿ?' ಎಂದ.

'ನಾನು ಮಾನವೀಯತೆಯಿಂದ ನಿಮ್ಮ ಮಗನನ್ನು ರಕ್ಷಿಸಿರುವೆ. ಯಾರೇ ಆಗಿದ್ದರೂ ಅದನ್ನೇ ಮಾಡುತ್ತಿದ್ದರು. ಕಾರಣ ನನಗೆ ಹಣ ಬೇಡ' ಎಂದ.

ಅಷ್ಟರೊಳಗೆ ರೈತನ ಮಗ ಗುಡಿಸಲಿನಿಂದ ಧ್ವನಿ ಕೇಳಿ ಹೊರ ಬಂದ. ಶ್ರೀಮಂತ ರೈತನ ಮಗನನ್ನು ನೋಡಿ 'ಹಾಗಾದರೆ ನನಗೊಂದು ಅವಕಾಶ ಕೊಡಿ. ನಿಮ್ಮ ಮಗನ ಮುಖದಲ್ಲಿ ಬುದ್ಧಿವಂತಿಕೆಯ ಕಳೆ ಇದೆ ಅವನನ್ನು ಚೆನ್ನಾಗಿ ಓದಿಸಿ, ಅವನ ವಿದ್ಯಾಭ್ಯಾಸದ ಖರ್ಚನ್ನಾದರೂ ನಾನು ನೋಡಿಕೊಳ್ಳುತ್ತೇನೆ. ಇಷ್ಟಾದರೂ ನಿಮ್ಮ ಋಣ ತೀರಿಸಿದ ಸಮಾಧಾನ ನನಗೆ' ಎಂದ.

ರೈತನನ್ನು ಒಪ್ಪಿಸಿ, ವಂದನೆ ಹೇಳಿ ಹೊರಟುಹೋದನು. ಮುಂದಿನ ವರ್ಷಗಳಲ್ಲಿ ರೈತನ ಮಗನ ವಿದ್ಯಾಭ್ಯಾಸಕ್ಕೆ ನೆರವು ನೀಡಿದರು. ರೈತನ ಮಗ ಲಂಡನ್ನಿನ ಸಂತ ಮೇರಿ ವೈದ್ಯಕೀಯ ಕಾಲೇಜಿನ ಪದವೀಧರನಾದ. ಹಲವಾರು ವೈದ್ಯಕೀಯ ಸಂಶೋಧನೆಗಳನ್ನು ಕೈಗೊಂಡ. ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಜೀವನಿರೋಧಕವಾದ ಪೆನ್ಸಿಲಿನ್ ಕಂಡುಹಿಡಿದ. ಇವರಾರೆಂದು ನಿಮಗೆ ಗೊತ್ತಾಯಿತೇ? ಇವರೇ ಅಲೆಕ್ಸಾಂಡರ್ ಫ್ಲೆಮಿಂಗ್ ಎಂಬ ಪ್ರಸಿದ್ಧ ವಿಜ್ಞಾನಿ!

ಕೆಲವು ವರ್ಷಗಳಾದ ಮೇಲೆ ಶ್ರೀಮಂತನ ಮಗನಿಗೆ ನ್ಯೂಮೋನಿಯ ರೋಗ ತಗುಲಿತು. ಆಗಲೂ ಅವನನ್ನು ಉಳಿಸಿದ್ದು ಇದೇ ರೈತನ ಮಗ ಸಂಶೋಧಿಸಿದ ಪೆನ್ಸಿಲಿನ್. ಆ ಹೊತ್ತಿಗೆ ರಾಜಕಾರಣದಲ್ಲಿ ಪ್ರಬುದ್ಧಾವಸ್ಥೆಯಲ್ಲಿದ್ದ ಶ್ರೀಮಂತನ ಮಗ ಮುಂದೆ ಇಂಗ್ಲೆಂಡಿನ ಪ್ರಧಾನ ಮಂತ್ರಿಯೂ ಆದ. ಇವರೇ ಸರ್ ವಿನ್‌ಸ್ಟನ್ ಚರ್ಚಿಲ್.

(ಸಂಗ್ರಹ: ಗೀತಾ ರಾವ್)

ಮೇ 2017ರಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

| | | | |
|---|---|---|---|
| 1 | ಸೌಭಾಗ್ಯ, ಮೈಸೂರು | 16 | ಮಲ್ಲಮ್ಮ, ಬಳ್ಳಾರಿ |
| 2 | ವಿಸ್ಮಿತಾ, ಮಂಡ್ಯ | 17 | ಲತಾಂಗಿ, ತುಮಕೂರು |
| 3 | ಲಲಿತಾಂಬಾ, ರಾಮನಗರ | 18 | ಸೇವಂತಿ, ಮಡಿಕೇರಿ |
| 4 | ಯಶಸ್ವಿನಿ, ಮೈಸೂರು | 19 | ವಿದ್ಯಾಧರಿ, ಬೆಂಗಳೂರು |
| 5 | ಮೋನಿಕಾ, ಉಡುಪಿ | 20 | ಭುವನಾ, ಮಡಿಕೇರಿ |
| 6 | ಭವಾನಿ, ಮೈಸೂರು | 21 | ಜಾಹ್ನವಿ, ಬೇಲೂರು |
| 7 | ಪ್ರಶಾಂತಿ, ಬೆಂಗಳೂರು | 22 | ನಿರ್ಮಲಾ, ಶಿವಮೊಗ್ಗ |
| 8 | ರೂಪವತಿ, ಹಾಸನ | 23 | ಪ್ರೇರಣಾ, ಕಾರವಾರ |
| 9 | ವಾರಿಜಾಕ್ಷಿ, ಹಾಸನ | 24 | ಶೀಲಾದೇವಿ, ಅರಸೀಕೆರೆ |
| 10 | ಶೈಲಜಾ, ಕಡೂರು | 25 | ಮಾಲವಿಕ, ಚಿಕ್ಕಬಳ್ಳಾಪುರ |
| 11 | ಸುಮಲತಾ, ಮೈಸೂರು | 26 | ಯೋಗೇಶ್ವರಿ, ಮೈಸೂರು |
| 12 | ದೇವಕಿ, ಮಂಗಳೂರು | 27 | ರಾಜಲಕ್ಷ್ಮಿ, ಮದ್ದೂರು |
| 13 | ತನ್ಮಯಿ, ಬೆಂಗಳೂರು | 28 | ಸ್ಪಂದನಾ, ಚನ್ನಪಟ್ಟಣ |
| 14 | ನೀಲಾಕ್ಷಿ, ತಿಪಟೂರು | 29 | ವೈಷ್ಣವಿ, ರಾಯಚೂರು |
| 15 | ಬಿಂದುಮತಿ, ಹಾಸನ | 30 | ಶ್ರೀರಂಜನಿ, ಊಟಿ |

## ಕನ್ನಡದ ಕುವರಿ ಯುಪಿಎಸ್ಸಿ 2016ರ ಪರೀಕ್ಷೆಯಲ್ಲಿ ಮೊದಲಿಗಳು



ಕೋಲಾರ ಜಿಲ್ಲೆಯ ಕೆಂಬೋಡಿ ಗ್ರಾಮದ ಶ್ರೀ ರಮೇಶ್ ಹಾಗೂ ವಿಮಲಾರವರ ಪುತ್ರಿ ಕೆ.ಆರ್. ನಂದಿನಿ 2016ರ ಯುಪಿಎಸ್ಸಿ ಪರೀಕ್ಷೆಯಲ್ಲಿ ಮೊದಲನೆಯ ರ‍್ಯಾಂಕ್ ಪಡೆದಿರುತ್ತಾರೆ. ಇವರ ಹೈಸ್ಕೂಲ್ ವಿದ್ಯಾಭ್ಯಾಸ ಕೋಲಾರದ ಚಿನ್ಮಯ ಶಾಲೆಯಲ್ಲಿ ಹಾಗೂ ಮೂಡಿಗೆರೆಯ ಆಳ್ವಾಸ್ ಕಾಲೇಜಿನಲ್ಲಿ ಪಿಯುಸಿ ಹಾಗೂ ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಪಡೆದಿರುತ್ತಾರೆ. ಇವರು ಐಎಎಸ್ ಮಾಡಿಕೊಂಡು ದೇಶ ಹಾಗೂ ಜನರ ಸೇವೆ ಮಾಡಬೇಕೆಂದು ಆಸೆಯನ್ನಿಟ್ಟುಕೊಂಡಿರುತ್ತಾರೆ. ಇವರ ಆಸೆ ಆಕಾಂಕ್ಷೆಗಳು ಈಡೇರಲಿ ಎಂದು ಮ.ವಿ. ಬಳಗ ಇವರಿಗೆ ಶುಭವನ್ನು ಕೋರಿದೆ.



# ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ

## ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ

**16. ಇನ್ಸುಲಿನ್ ಚುಚ್ಚುಮದ್ದು ತೆಗೆದುಕೊಂಡರೆ ಮಾತ್ರೆಯ ಅವಶ್ಯಕತೆಯಿಲ್ಲ**

ಒಮ್ಮೆ ರೋಗಿ ಇನ್ಸಲಿನ್ ಚುಚ್ಚುಮದ್ದನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರೆ ವೈದ್ಯರು ಹೇಳಿದ್ದರೂ ಮಾತ್ರೆಯನ್ನು ನಿಲ್ಲಿಸಿಬಿಡುತ್ತಾರೆ. ಆದರೆ ವೈದ್ಯರ ಹತ್ತಿರ ತೆಗೆದುಕೊಳ್ಳುತ್ತಿದ್ದೇನೆ ಎನ್ನುತ್ತಾರೆ. ರೋಗಿಗೆ ಇನ್ಸುಲಿನ್ ತೆಗೆದುಕೊಂಡ ಮೇಲೆ ಮತ್ತೆ ಮಾತ್ರೆ ಏಕೆ ಎಂಬ ತಪ್ಪು ಅಭಿಪ್ರಾಯವಿರುತ್ತದೆ. ಶರೀರದಲ್ಲಿ ಬೀಟಾ ಜೀವಕೋಶಗಳು ಪ್ರಕೃತಿದತ್ತವಾಗಿ ಇನ್ಸುಲಿನ್ ಉತ್ಪಾದಿಸುವ ಶಕ್ತಿಯಿರುತ್ತದೆ. ಮಾತ್ರೆಗಳು ಆ ಜೀವಕೋಶಗಳನ್ನು ಪ್ರಚೋದಿಸಿ ಹೆಚ್ಚು ಉತ್ಪತ್ತಿ ಮಾಡುತ್ತದೆ. ಮತ್ತು ಇನ್ಸುಲಿನ್ ತಡೆಯನ್ನು ನಿವಾರಿಸಿ ಮಾತ್ರೆಗಳು ಸಕ್ಕರೆ ಅಂಶ ಜೀವಕೋಶಗಳಿಗೆ ರವಾನೆಯಾಗಲು ಸಹಾಯ ಮಾಡುತ್ತದೆ. ಇವೆಲ್ಲವು ಮಿತಿ ಮೀರಿದಾಗ ಇನ್ಸುಲಿನ್ ಕೊಡಲು ವೈದ್ಯರು ನಿರ್ಧರಿಸುತ್ತಾರೆ. ಈ ದೃಷ್ಟಿಯಿಂದ ಪ್ರಕೃತಿದತ್ತವಾಗಿ ಉತ್ಪತ್ತಿಯಾಗುವ ಸ್ವಲ್ಪ ಇನ್ಸುಲಿನ್ ಶರೀರಕ್ಕೆ ಪ್ರಯೋಜನವಾಗಲು ಮಾತ್ರೆಗಳನ್ನು ಸ್ವಲ್ಪಮಟ್ಟಿಗೆ ಉಪಯೋಗಿಸುವುದು ಒಳ್ಳೆಯದು. ನಿಮ್ಮ ವೈದ್ಯರ ಜೊತೆ ಇವರ ಬಗ್ಗೆ ಮುಕ್ತವಾಗಿ ಚರ್ಚಿಸಿ. ಆದರೆ ನೀವೇ ಸ್ವತಃ ಮಾತ್ರೆ ನಿಲ್ಲಿಸುವ ಪ್ರಯತ್ನ ಮಾಡಬೇಡಿ.

**17. ಕ್ರಮಬದ್ಧ ವ್ಯಾಯಾಮ ಮಾಡದೆ ಕಟ್ಟೆ ಮೇಲೆ ಕೂತು ಕಾಲಹರಣ ಮಾಡುವುದು.**

ನಾನು ಕಂಡಂತೆ ಅನೇಕ ರೋಗಿಗಳು ನಿರ್ದಿಷ್ಟ ಹಾಗೂ ಕ್ರಮಬದ್ಧ ವ್ಯಾಯಾಮ ಮಾಡದೆ ಕೇವಲ ಅಷ್ಟು ದೂರ ನಡೆದು ಹೋಗಿ ಅಲ್ಲೇ ಕಟ್ಟೆಯ ಮೇಲೆ ಕೂತು ಹರಟೆ ಹೊಡೆದು ವಾಪಸಾಗುತ್ತಾರೆ. ಆದರೆ ಸಮಯ ಮಾತ್ರ 2 ಗಂಟೆ ಆಗಿರುತ್ತದೆ. ಆದರೆ ಶರೀರದ ದೈಹಿಕ ಶ್ರಮ ಏನೇನೂ ಆಗಿರುವುದಿಲ್ಲ. ಇದರಿಂದ ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಬರುವುದಿಲ್ಲ. ದಿನಕ್ಕೆ 1 ಗಂಟೆ ನಡಿಗೆ ಮಾಡಿದರೆ 20%ಕ್ಕೆ ಅಂಶ ನಿಯಂತ್ರಣಕ್ಕೆ ಬರುತ್ತದೆ. ಆದುದರಿಂದ ರೋಗಿಗಳು ದಿನನಿತ್ಯ ಕ್ರಮಬದ್ಧವಾಗಿ ವ್ಯಾಯಾಮ ಮಾಡುವುದು ಬಹಳ ಮುಖ್ಯ.

**18. ದೇವಸ್ಥಾನ ಪ್ರಾಂಗಣದಲ್ಲಿ ಬರಿಗಾಲಿನಲ್ಲಿ ಸುತ್ತುವುದು ಹಾಗೂ ಯಾತ್ರಾಸ್ಥಳಗಳಲ್ಲಿ ಬರಿಗಾಲಿನಲ್ಲಿ ನಡೆಯುವುದು.**

ಬೇಸಿಗೆಯಲ್ಲಿ ದೇವಸ್ಥಾನದ ಪ್ರಾಂಗಣ ಸುಡುತ್ತಿರುತ್ತದೆ. ಅಂತಹ ಸಮಯದಲ್ಲಿ ರೋಗಿಗಳು ಬರಿಗಾಲಿನಲ್ಲಿ ಸುತ್ತು ಹಾಕಿ ಕೆಲವೊಮ್ಮೆ ಪಾದಗಳಲ್ಲಿ ಬೊಬ್ಬೆ ಬರಿಸಿಕೊಂಡು ತೊಂದರೆಗಳಿಗೆ ಸಿಲುಕುತ್ತಾರೆ. ಆದುದರಿಂದ ದೇವಸ್ಥಾನ ಸುತ್ತು ಹಾಕಿದಾ ಆ ಸ್ಥಳಗಳಲ್ಲಿ ಸಣ್ಣ ಕಲ್ಲುಮುಳ್ಳು ಇತರೆ ವಸ್ತುಗಳು ಚುಚ್ಚದ ರೀತಿ ನೋಡಿಕೊಳ್ಳುವುದು ಬಹಳ ಮುಖ್ಯವಾದ ಕ್ರಮ. ನೆಲ ಬಿಸಿ ಇದ್ದರೆ ಸುತ್ತು ಹಾಕಬೇಡಿ. ಹಾಗೆಯೇ ಭಗವಂತನಿಗೆ ಕೈ ಮುಗಿಯಿರಿ.

*(ಮುಂದುವರಿಯುವುದು)*




B-Soft Infotech
No. 2352, 4th Cross, 6th Main
Vinayakanagara, Mysore 570 012
Contact No. 0821-4195190, 88677-74447





**ಮೊದಲನೆ ವರ್ಷದ ದಾಂಪತ್ಯ ಜೀವನ (28-6-2017) ರಂದು ಪೂರೈಸುತ್ತಿರುವ ಮೈಸೂರಿನ ರಾಜ ರಾಣಿಯರಿಗೆ ಹಾರ್ದಿಕ ಶುಭಾಶಯಗಳು**







Prop: **R. Sanjay**

**METRO TAILORS**

No. 612, N.S. Road,
Mysore-24.
Ph: 95906-66566


## ಪುಣ್ಯವಂತರಾಗುವುದಕ್ಕೆ 5 ಮಾರ್ಗಗಳು – ಆಚರಿಸಬೇಕಾದ ದಿನನಿತ್ಯ ಕಾರ್ಯಕ್ರಮಗಳು

1. ಗೋವಿಗೆ ಹುಲ್ಲು (ಮೇವು) ಕೊಡುವುದರಿಂದ ಗೃಹಪೀಡೆ ದೂರವಾಗುವುದು.

2. ಪಕ್ಷಿಗಳಿಗೆ ಕಾಳು ಹಾಕುವುದರಿಂದ ವ್ಯಾಪಾರ ವೃದ್ಧಿಯಾಗುವುದು.

3. ನಾಯಿಗಳಿಗೆ ಆಹಾರ ಕೊಡುವುದರಿಂದ ಶತ್ರುಗಳು ಕಡಿಮೆಯಾಗುತ್ತಾರೆ.

4. ಇರುವೆಗಳಿಗೆ ಆಹಾರ ಕೊಡುವುದರಿಂದ ಋಣಭಾರ ಇಳಿಯುವುದು.

5. ಮೀನುಗಳಿಗೆ ಗೋಧಿಹಿಟ್ಟಿನ ಉಂಡೆ ಹಾಕುವುದರಿಂದ ಕಳೆದುಕೊಂಡ ಸಂಪತ್ತು ಪುನಃ ಮರಳಿ ಲಭಿಸುವುದು.



RNI No. KARKAN/2015/71642
Decl No. MAG (Declaration)/16/2016-17

ಪತ್ರಿಕಾ ರಂಗದಲ್ಲಿ ಕೆಲಸ ಮಾಡಲಿಚ್ಛಿಸುವವರಿಗೆ ನಮ್ಮ ಸಂಘದಲ್ಲಿ ಸದಸ್ಯತ್ವ ಪಡೆಯಲು ಅವಕಾಶ ಉಂಟು ಹಾಗೂ ವಿವಿಧ ಪದಾಧಿಕಾರಿಗಳ ಹುದ್ದೆಗಳು ಮಹಿಳೆ ಹಾಗೂ ಪುರುಷರಿಗೆ ಇವೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಭೇಟಿ ಮಾಡಿ ಅಥವಾ ಸಂಪರ್ಕಿಸಿ. ಮಹಿಳೆಯರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಹಮ್ಮಿಕೊಳ್ಳಲಾಗುವುದು. ಜನಸಾಮಾನ್ಯರು ಕಾರ್ಯಕ್ರಮದಲ್ಲಿ ಬಂದು ಭಾಗವಹಿಸಿ. ನಿಮ್ಮ ಪ್ರತಿಭೆಗೆ ತಕ್ಕಂತೆ ವೇದಿಕೆ ಸಜ್ಜುಗೊಳಿಸಲಾಗುವುದು. ಸಂಘವು ಸದಾ ಕಾಲ ನಿಮ್ಮ ಜೊತೆಯಲ್ಲಿರುತ್ತದೆ.



**ಕರ್ನಾಟಕ ಪ್ರೆಸ್ ಕೌನ್ಸಿಲ್ (ರಿ.)**

ಸಂ. 1149, 'ಪ್ರಗತಿ', ರೈಲ್ವೆ ಸ್ಟೇಷನ್ ರಸ್ತೆ,
ಚಾಮರಾಜಪುರಂ, ಮೈಸೂರು

**ಮೊ. 88803-34444**

**ನೀವು ಬನ್ನಿ, ನಿಮ್ಮ ಸ್ನೇಹಿತರನ್ನು ಕರೆತನ್ನಿ**

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, Decl No. MAG (Declaration)/16/2016-17 and RNI No. KARKAN/2015/71642

ತೆರೆದ ಅಂಚೆ